ವೇದಗಳಲ್ಲಿ ವರ್ಣ ವ್ಯವಸ್ಥೆಯಿಲ್ಲ.

ಲಾಹೋರಿನ 'ಕ್ರಾಂತಿ' ಎಂಬ ಪತ್ರಿಕೆಯಲ್ಲಿ ಈ ರೀತಿ ಪ್ರಕಟವಾಗಿದೆ:—"ಜಾತಿಗೋತ್ರ, ವರ್ಣವ್ಯವಸ್ಥೆ ಮುಂತಾದವುಗಳ ಯಥಾರ್ಥ ಸ್ವರೂಪವನ್ನು ನಾವು ತೆರೆದು ತೋರಿಸಿದ ಕೂಡಲೇ ಕಟ್ಟಾ ಸನಾತನಿ ಪಂಥಿಗಳಂತೆಯೇ ಸಿದ್ಧಾಂತಿ ಆರ್ಯ ಸಮಾಜಿಗಳಲ್ಲಿಯೂ ಗಡಿಬಿಡಿಯುಂಟಾಗಿದೆ. ಪೂರ್ವದ ಜನರಾದರೋ ವರ್ಣಗಳಲ್ಲಿ ಉಚ್ಚ ನೀಚತ್ವವನ್ನು ತಿಳಿಯುತ್ತಿದ್ದು ಈಗಿನ ಆರ್ಯ ಸಮಾಜಿಗಳು ವರ್ಣ ವ್ಯವಸ್ಥೆಯಲ್ಲಿ ಜನ್ಮ ಮೂಲಕ ಉಚ್ಚ ನೀಚತ್ವವನ್ನು ಭಾವಿಸುವದಿಲ್ಲೆಂಬುದು ನಿಜ. ಆದರೆ ವರ್ಣ ವ್ಯವಸ್ಥೆಯು ಇರುವದಾದರೆ ಜನ್ಮದಿಂದಲೇ ಶ್ರೇಷ್ಠ ಕನಿಷ್ಠವೆಂಬ ಭಾವನೆಯಿದ್ದರೇನೇ ಇರಬಲ್ಲದು. ಗುಣ ಕರ್ಮ ಸ್ವಭಾವದ ಮೇಲಿಂದ ವರ್ಣ ವ್ಯವಸ್ಥೆ ಇರುವೆದು ಶಕ್ಯವೇ ಇಲ್ಲವೆಂದು ನಾವು ಹಿಂದೊಮ್ಮೆ ತಿಳಿಸಿ ಕೊಟ್ಟಿದ್ದೇವೆ.

ಇನ್ನು ವೇದಗಳಲ್ಲಿ ನಾಲ್ಕು ವರ್ಣಗಳಿವೆಯೆಂದು ಹೇಳಿರುವುದೆ? ಇಲ್ಲವೇ ಇಲ್ಲ. ಮನುಷ್ಯರನ್ನು ನಾಲ್ಕು ವಿಭಾಗಗಳನ್ನಾಗಿ ವಿಭಾಗಿಸಿರುವದು ವೇದದಲ್ಲಿ ಇರುವದೇ ಇಲ್ಲ. "ಉಭೌ ವರ್ಣೌ" ಹೀಗೆ ಎರಡೇ ವರ್ಣಗಳಿರುವವೆಂದು ಹೇಳಿರುವದು. ಒಂದು ಆರ್ಯ ವರ್ಣ ಇನ್ನೊಂದು ದಸ್ಯು ವರ್ಣ. ಒಂದರ ವರ್ಣ ಬಿಳಿದು ಇನ್ನೊಂದರ ವರ್ಣ ಕರಿದು. ಈಗಿನ ಆರ್ಯ ಸಮಾಜಿಗಳು ಹೇಳುತ್ತಿರುವಂತೆ ಬ್ರಾಹ್ಮಣ ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬವುಗಳು ವರ್ಣಗಳೆಂದು ವೇದದಲ್ಲಿ ಎಲ್ಲಿಯೂ ಹೇಳಿಲ್ಲ.

ಆಗ್ರಾದಲ್ಲಿಯ "ಆರ್ಯಮಿತ್ರ" ಪತ್ರಿಕೆಯ ಸಂಪಾದಕರು "ಯಥೇಮಾಂ ವಾಚಂಗ" ಮತ್ತು "ಬ್ರಾಹ್ಮಣೋಸ್ಯ ಮುಖ ಮಾಸೀತ್" ಎಂಬ ಎರಡು ವೇದ ಮಂತ್ರಗಳನ್ನು ಉದ್ಧರಿಸಿ ವೇದದಲ್ಲಿ ನಾಲ್ಕು ವರ್ಣಗಳಿಗಿಂತಲೂ ಹೆಚ್ಚಿಗೆ ವರ್ಣಗಳು ಹೇಳಲ್ಪಟ್ಟವೆಯೆಂದು ಪ್ರತಿವಾದಿಸುತ್ತಾರೆ. ಅಂದಮೇಲೆ ಪರಮಾತ್ಮನೇ ಎಲ್ಲ ಜನರನ್ನು ನಾಲ್ಕು ಭಾಗಗಳಲ್ಲಿ ವಿಭಾಗಿಸಿದನೆಂದು ನಂಬುವ ಆರ್ಯ ಸಮಾಜಿಗಳೆಲ್ಲಿ! ವರ್ಣಗಳು ನಾಲ್ಕಕ್ಕಿಂತಲೂ ಅಧಿಕವಾಗಿರುವವೆಂದು ಹೇಳುವ ಆರ್ಯ ಸಮಾಜಿಗಳೆಲ್ಲಿ!

ತಮಗೆ ಬೇಕಾದರೆ ಸಮಾಜವನ್ನು ಒಂದೇ ವರ್ಣವೆಂದು ತಿಳಿದು ಉದ್ಯೋಗಗಳ ಮೇರೆಗೆ ನೂರಾರು ವಿಭಾಗಗಳನ್ನು ಮಾಡಲಿ ಅದು ಮನುಷ್ಯಕೃತವಾದೀತೇ ಹೊರತು ದೇವಕೃತವೆಂದು ನಂಬುವದು ನಿರಾಧಾರವಾದ ಮಾತು. ವೇದಗಳಲ್ಲಿ ಎಲ್ಲಿಯಾದರೂ ಚತುರ್ವರ್ಣ ವ್ಯವಸ್ಥೆಯನ್ನಾಗಲಿ ಇಲ್ಲವೆ ಬ್ರಾಹ್ಮಣ ವರ್ಣ, ಕ್ಷತ್ರಿಯವರ್ಣ, ವೈಶ್ಯವರ್ಣ, ಶೂದ್ರವರ್ಣವೆಂದಾಗಲಿ ಹೇಳಿದುದನ್ನು ತೋರಿಸಿಕೊಡಲು ನಾವು ಸಿದ್ಧಾಂತಿ ಆರ್ಯ ಸಮಾಜಿಗಳಿಗೆ ಬಹಿರಂಗವಾಗಿ ಆಹ್ವಾನ ಮಾಡುತ್ತೇವೆ. ವೇದಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಶಬ್ದಗಳಿರುವುದೇನೋ ನಿಜ. ಆದರೆ ಅವು ವರ್ಣಗಳಲ್ಲ.

ಇತ್ತ ಕಡೆಯ ಕೆಲವು ಆರ್ಯ ಸಮಾಜಿಗಳು ವೇದಗಳಲ್ಲಿ ನಾಲ್ಕು ವರ್ಣಗಳಿರುವವೆಂದೂ, ವರ್ಣ ವ್ಯವಸ್ಥೆಯನ್ನು ಮಾನಿಸದವರು ಆರ್ಯ ಸಮಾಜಿಗಳೇ ಅಲ್ಲವೆಂದೂ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದಾರೆ. ಒಂದಾನೊಂದು ಕಾಲಕ್ಕೆ ಆರ್ಯ ಸಮಾಜಿಗಳು ಸಂಶಯಗಳನ್ನು ಸ್ವತಃ ಪ್ರಕಟಿಸಿ ವಿವೇಚನೆ ಮಾಡುತ್ತಿದ್ದರು. ಆದರೆ ಈಗ ಆರ್ಯ ಸಮಾಜಿಗಳೇ ಬರೆದು ಕಳಿಸುವುದನ್ನು ಸಹ ಪ್ರಕಟಿಸುವದಿಲ್ಲ.

ಚತುರ್ವರ್ಣಗಳು ವೈದಿಕವೆಂದು ಹೇಳುವ ಸಜ್ಜನರು ಕೃಪೆ ಮಾಡಿ ನಮಗೆ ತೋರಿಸಿಕೊಡಲಿ "ಯಥೇಮಾಂ ವಾಚಂಗ" ಮೊದಲಾದ ಮಂತ್ರಗಳಲ್ಲಿ ಬ್ರಾಹ್ಮಣ, ರಾಜನ್ಯ ಮೊದಲಾದ ಶಬ್ದಗಳು ಗೋಚರವಾಗುತ್ತಿರುವುದರಿಂದ ಅವು ವರ್ಣಗಳೆಂದು ತಿಳಿಯುವದಾದರೆ ಅನೇ ಮಂತ್ರಗಳಲ್ಲಿ ಬರುವ "ಅರನ್" ಮತ್ತು "ಸೋ" ಎಂಬ ಶಬ್ದಗಳೂ ವರ್ಣಗಳೆಂದು ಏಕೆ ತಿಳಿಯಬಾರದು?

ಬ್ರಾಹ್ಮಣ ಕ್ಷತ್ರಿಯ, ಮತ್ತು ವೈಶ್ಯ ಇವು ಮೂರು ಆರ್ಯರಲ್ಲಿ ಅಂತರ್ಗತವಾಗಿವೆ. ಶೂದ್ರ ವರ್ಣವೂ ಆರ್ಯರಲ್ಲಿಯೇ ಇರುತ್ತದೆಯೇ? ಒಂದುವೇಳೆ ಇದ್ದದ್ದಾದರೆ "ಉತಶೂದ್ರೆ ಉತ ಆರ್ಯೇ" (ಋ.ಗ್ವೇದ) ಎಲ್ಲರನ್ನೂ ಪ್ರೇಮದಿಂದ ಕಾಣುವೆನು. ಅವನು ಆರ್ಯನೇ ಇರಲಿ ಅಥವಾ ಶೂದ್ರನೇ ಇರಲಿ ಎಂಬುದರ ತಾತ್ಪರ್ಯವೇನು? ಶೂದ್ರರು ಆರ್ಯರ ವ್ಯತಿರಿಕ್ತವಾಗಿದ್ದದ್ದಾದರೆ ಆರ್ಯರಲ್ಲಿ ನಾಲ್ಕು ವರ್ಣಗಳಿಲ್ಲವೆಂದ ಹಾಗಾಯಿತು.

ಇನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಶಬ್ದಗಳು ವೇದಮಂತ್ರಗಳಲ್ಲಿ ಬಂದಿರುವದರಿಂದ ಅವುಗಳನ್ನು ವರ್ಣಗಳೆಂದು ನಂಬುವದಾದರೆ ಯಜುರ್ವೇದದ ೩೦ ನೆಯ ಅಧ್ಯಾಯದ ೫ ನೆಯ ಮಂತ್ರದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ಶಬ್ದಗಳ ಜೊತೆಗೆ, **ವೀರೇಣ, ಕಲ್ಯ, ಪಂಚಲಿ, ತಸ್ಕರ** ಮೊದಲಾದ ಹೆಸರುಗಳೂ ಇರುತ್ತವಲ್ಲವೇ? ಅವುಗಳನ್ನು ವರ್ಣಗಳೆಂದು ಏಕೆ ತಿಳಿಯಬಾರದು?"

'ಕ್ರಾಂತಿ' (ಉರ್ದು)

[ವೀರಶೈವ ಬಂಧುಗಳು ಈ ವಿಷಯವನ್ನು ಚನ್ನಾಗಿ ಪರ್ಯಾಲೋಚಿಸಲಿ. ವೇದಗಳೇ ಸರ್ವಸ್ವ, ವೇದಗಳೇ ಸರ್ವ ಪ್ರಾಮಾಣ್ಯವೆಂದು ನಂಬುವ ಶ್ರೀ ಧರ್ಯಾನಂದರ ಶಿಷ್ಯರಾದ ಕೆಲವು ಆರ್ಯಸಮಾಜಿಗಳೇ ತಮ್ಮ ವೇದಗಳಲ್ಲಿ ವರ್ಣ ವ್ಯವಸ್ಥೆಯು ಇರುವದಿಲ್ಲವೆಂದೂ, ಒಂದುವೇಳೆ ಇದೆಯೆಂದು ತೋರಿಸಿ ಕೊಟ್ಟರೆ ಅದು ಮನುಷ್ಯಕೃತವೇ ಹೊರತು ದೇವಕೃತವಲ್ಲವೆಂದೂ ಸಾರುತ್ತಿರಲು ವೇದಗಳಿಗೆ ಅಷ್ಟು ಸಂಬಂಧವಿಲ್ಲದ ನಾವು ಚತುರ್ವರ್ಣ ವ್ಯವಸ್ಥೆಯನ್ನು ಮಾನಿಸುವದು ಮೂಢತನವಲ್ಲವೇ? -ಸಂ.]

ಭೂಗರ್ಭದಲ್ಲಿ ಬಾಂಬುಗಳು.

ಬ್ರಿಟನ್ನಿನ ಮಿ. ಜಾನ್ ನೋರ್ಟನ್ ಎಂಬ ಸಂಶೋಧಕನು ಲಂಡನ್ ಎಂಬ ನಡುಗಡ್ಡೆಯ ಮಣ್ಣಿನೊಳಗೆ ಕೆಲವು ಕಲ್ಲುಗಳನ್ನು ಕಂಡುಹಿಡಿದಿದ್ದಾನೆ. ಅವನ್ನು ಯಾವುದಕ್ಕಾದರೂ ಹೊಡೆದರೆ ದಿಗ್ಗನೆ ಹಾರಿ ಭಯಂಕರ ಸಪ್ಪಳ ಮಾಡುತ್ತವೆ. ಮನುಷ್ಯರು ಮಾಡುವ ಬಾಂಬುಗಳಿಗಿಂತಲೂ ಪ್ರಕೃತಿಯು ಮಾಡಿದ ಆ ಬಾಂಬುಗಳಿಂದ ಹೆಚ್ಚು ಸಪ್ಪಳವಾಗುತ್ತದಂತೆ.

ಭೂಗರ್ಭ ಶಾಸ್ತ್ರಜ್ಞರು ಇದರ ಕಾರಣವನ್ನು ಈ ರೀತಿ ಹೇಳುತ್ತಾರೆ. ಜ್ವಾಲಾಮುಖಿಯು ಉದ್ಭವಿಸುವ ಕಾಲಕ್ಕೆ ಒಳಗಿನ ತಪ್ತವಾಯುವು ಕಲ್ಲಿನ ತರದಲ್ಲಿ ಸಿಕ್ಕಿಕೊಳ್ಳಲು ಮೇಲಿನ ತಂಪು ಹವೆಯಿಂದ ತಪ್ತವಾದ ಆ ಕಲ್ಲು ಕೂಡಲೆ ತಣ್ಣಗಾಗುವದು. ಇದರಿಂದ ತಪ್ತವಾದ ಆ ವಾಯುವು ಕಲ್ಲಿನಲ್ಲಿ ಸಿಲ್ಕಿಕೊಂಡು ಬಿಡುವದು. ಅದುದರಿಂದಲೇ ಆ ಕಲ್ಲುಗಳಿಗೆ ಆಘಾತವುಂಟಾದರೆ ಅವು ದಿಗ್ಗನೇ ಹಾರಿ ಸಪ್ಪಳ ಮಾಡುವವು.

ಮಹಾರಾಷ್ಟ್ರ ಬ್ರಾಹ್ಮಣ ಆರ್ಥಿಕ ಪರಿಷತ್ತು

ಪುಣೆಯಲ್ಲಿ ಕಳೆದ ೧೬ ಮತ್ತು ೧೭ ನೆಯ ತಾರೀಖುಗಳಲ್ಲಿ ಮಹಾರಾಷ್ಟ್ರ ಬ್ರಾಹ್ಮಣ ಆರ್ಥಿಕ ಪರಿಷತ್ತಿನ ಮೊದಲನೆಯ ಅಧಿವೇಶನವು ಕೂಡಿದ್ದಿತು. ಇದಕ್ಕೆ ಶ್ರೀ ಹರಿ ವಿನಾಯಕ ಪಾಟ ಸ್ಕರ್ ಎಂಬ ಚಾಳೀಸಗಾಂವ ಎಂಬಲ್ಲಿಯ ಪ್ರಮುಖರು ಅಧ್ಯ ಕ್ಷರಾಗಿದ್ದರು. ಈ ಸಭೆಗೆ ಡಾ. ಬಾ. ಸಿ. ಮುಂಜೆ, ಶ್ರೀ ಲ. ಬ. ಭೋಪಟಕರ್, ಶ್ರೀ. ತಾತ್ಯಾಸಾಹೇಬ ಗೋಖಲೆ ಎಂ. ಎಲ್. ಸಿ. ಪ್ರೊ. ಪಿ. ಎಂ. ಲಿಮಯೆ ಮೊದಲಾದ ರಾಜಕೀಯ, ಸಾಮಾ ಜಿಕ, ಆರ್ಥಿಕ ಮೊದಲಾದ ಎಲ್ಲ ಕಾರ್ಯ ಕ್ಷೇತ್ರಗಳಲ್ಲಿಯ ಸಾಧಾ ರಣ ೨೦೦ ಪ್ರಮುಖ ಮುಂದಾಳುಗಳು ಬಂದಿದ್ದರು.

ಭಾಷಣಗಳ ಮುಖ್ಯಾಂಶ.

ಸ್ವಾಗತಾಧ್ಯಕ್ಷರಾದ ಶ್ರೀ ಆಣ್ಣಾಸಾಹೇಬ ವರ್ತಕ ಇವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು—ಬ್ರಾಹ್ಮಣ ವರ್ಗವು ಆರ್ಥಿಕ ಸ್ಥಿತಿಯಲ್ಲಿ ಬಹು ಕಷ್ಟಕ್ಕೊಳಗಾಗಿದೆ. ಇಂಗ್ಲಿಷ ಸರಕಾರವು ಈಗ ಸರಕಾರಿ ನೌಕರಿಯನ್ನು ಜಾತಿವಿಶಿಷ್ಟವಾಗಿ ಕೊಡಲು ಪ್ರಾರಂ ಭಿಸಿ ಬ್ರಾಹ್ಮಣರನ್ನು ಹೊರಗೆ ದೂಡಿದ್ದರಿಂದ ಆರ್ಥಿಕ ತೊಂದರೆ ಯು ಬ್ರಾಹ್ಮಣರಿಗೆ ಹೆಚ್ಚು ಸಂಭವಿಸಿದೆ.

ಬ್ರಾಹ್ಮಣರು ರಾಜಕಾರಣದಲ್ಲಿ ಸೇರಿ ತಮ್ಮ ಸಮಾಜವನ್ನೇ ಮರೆತು ದೇಶಕ್ಕಾಗಿ ಸ್ವಾರ್ಥತ್ಯಾಗ ಮಾಡುತ್ತಾ ಬಂದರು. ಇನ್ನಾ ದರೂ ಇವರು ರಾಜಕಾರಣದಲ್ಲಿ ಇದ್ದೇ ಇರುವರು. ಆದರೆ ಇನ್ನು ಮುಂದಿನ ರಾಜಕಾರಣವು ಆರ್ಥಿಕ ಸ್ಥಿತಿ ಚೆನ್ನಾಗಿಲ್ಲದವರಿಂದ ಸಾಗುವಂತಿಲ್ಲ. ಪಾರ್ಸಿ, ಗುಜರಾಥಿ, ಬಂಗಾಲಿ ಜನಗಳು ಸಾಂಪ ತ್ತಿಕ ಸ್ಥಿತಿಯಲ್ಲಿ ಮುಂದಿರುವುದರಿಂದ ಅವರು ರಾಜಕಾರಣದಲ್ಲಿ ಮುಂದೆ ಬರುತ್ತಿದ್ದಾರೆ.

ಬ್ರಾಹ್ಮಣರು ತಮ್ಮ ಅಸ್ತಿತ್ವಕ್ಕಾದರೂ ಇನ್ನುಮೇಲೆ ನಾನಾ ಉದ್ಯೋಗಗಳನ್ನು ಮಾಡಿ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿ ಕೊಳ್ಳಬೇಕು. ಇನ್ನುಮೇಲೆ ರಾಜ ಕಾರಣದಲ್ಲಿ ಮುಂದೆ ಬರಬೇ ಕಾಗಿದ್ದರೆ ನಾವು ಸಂಪತ್ತುಳ್ಳವರಾಗಲೇ ಬೇಕಾಗಿದೆ. ಈಗ ವ್ಯಕ್ತಿಗತವಾಗಿ ಬ್ರಾಹ್ಮಣರು ಅನೇಕ ಉದ್ಯೋಗಗಳನ್ನು ಮಾಡು ತ್ತಿದ್ದಾರೆ. ಬ್ರಾಹ್ಮಣರು ನಾಟಕ ಮಂಡಳಿಗಳನ್ನು, ಮುದ್ರಣಾಲ ಯಗಳನ್ನು, ವರ್ತಮಾನ ಪತ್ರಗಳನ್ನು, ಪುಸ್ತಕದ ಅಂಗಡಿಗಳ ನ್ನು, ಊಟದ ಮನೆಗಳನ್ನು, ಕಿರಾಣಿ, ಬಟ್ಟೆ, ಸರಾಫಿ, ಮತ್ತು ಹೂಲಿಯುವ ಅಂಗಡಿಗಳನ್ನು ಇಟ್ಟೇ ಇಲ್ಲ; ಈ ಪುಣೆ ಪಟ್ಟಣದಲ್ಲಿ ಬ್ರಾಹ್ಮಣರು ಮಾಡದಿದ್ದ ಯಾವುದೂ ಉದ್ಯೋಗವೇ ಉಳಿದಿಲ್ಲ ವೆಂದು ಹೇಳಿದರೂ ಹೇಳಬಹುದು. ಇಷ್ಟೆಲ್ಲಾ ಉದ್ಯೋಗಗಳನ್ನು ಮಾಡುತ್ತಿದ್ದಾರೆ.

ಸಾಮುದಾಯಕ ಬಂಡವಾಳದಿಂದ ನಮ್ಮ ಜನರ ಆರ್ಥಿಕ ಉನ್ನತಿಗಾಗಿ ಪ್ರಯತ್ನಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ನಾವು ಹೀಗೆ ಜಾತಿ ವಿಶಿಷ್ಟವಾದ ಪ್ರಯತ್ನ ಮಾಡುತ್ತಿದ್ದೇವೆಂದು ಕೆಲವರು ಆಕ್ಷೇಪಿಸಬಹುದು. ಅದು ಸರಿಯಲ್ಲ. ನಮ್ಮ ಆರ್ಥಿಕ ಉನ್ನತಿಯು ರಾಷ್ಟ್ರದ ಆರ್ಥಿಕ ಉನ್ನತಿಯೇ ಆಗಿದೆ. ನಮ್ಮ ಪ್ರ ಯತ್ನವು ಅನ್ಯ ಜಾತಿಯವರಿಗೂ ಅನುಕರಣೀಯವಾದರೆ ಅದು ರಾಷ್ಟ್ರಕ್ಕೆ ಕ್ಷೇಮವಲ್ಲವೇ? ನಾವು ವಿದ್ಯೆಯಲ್ಲಿ ಮುಂದಿದ್ದರೂ ಆರ್ಥಿಕ ಸ್ಥಿತಿಯಲ್ಲಿ ಬಹು ಹಿಂದುಳಿದಿದ್ದೇವೆ. ಆದಕಾರಣ ನಾವು ಈ ಪ್ರಕಾರ ಜಾತಿ ವಿಶಿಷ್ಟವಾಗಿ ಪ್ರಯತ್ನಿಸುವದು ಅಹಿತಕರವೇ ನೂ ಅಲ್ಲ.

ಆ ಮೇಲೆ ಅಧ್ಯಕ್ಷರನ್ನು ಆರಿಸುವಾಗ ಶ್ರೀ ತಾತ್ಯಾಸಾಹೇಬ ಗೋಖಲೆ ಎಂ. ಎಲ್. ಸಿ. ಇವರು ಇದು ಜಾತಿವಿಶಿಷ್ಟ ಪ್ರಯತ್ನ ವಾದರೂ ಅನ್ಯರ ಉನ್ನತಿಗೆ ವಿಘಾತಕರವಾದುದಲ್ಲ. ರಾಷ್ಟ್ರಕ್ಕೆ ಹಿತಕರವಾದುದಾಗಿಯೇ ಇದೆ. ಈ ಪ್ರಯತ್ನವು ಚಿಕ್ಕದಾಗಿದ್ದರೂ ಇದರಿಂದಲೇ ಬ್ರಾಹ್ಮಣರ ಉದ್ಧಾರದ ಪ್ರಚಂಡ ವಟ ವೃಕ್ಷವು ಉತ್ಪನ್ನವಾಗುವುದೆಂದು ಹೇಳಿದರು.

ಅನಂತರ ಪರಿಷತ್ತಿನ ಶ್ರೇಯಸ್ಸನ್ನು ಕುರಿತು ಶ್ರೀಮಂತ ಬಾಬಾಸಾಹೇಬ ಈಚಲಕರಂಜಿಕರ್, ಶ್ರೀಮಂತ ಸರದಾರ ಮಾ ಧವರಾವ ಕಿಬೆ, ಔಂಧದ ದಿವಾಣಸಾಹೇಬರು, ಲಖನೌದ ಶ್ರೀ ಬರ್ವೆ ಮೊದಲಾದ ಪ್ರಮುಖರಿಂದ ಬಂದ ಸಂದೇಶಗಳನ್ನು ಓದಿ ಹೇಳಿದರು.

ಆಮೇಲೆ ಅಧ್ಯಕ್ಷರು ಬಂದು ದೀರ್ಘವಾದ ಭಾಷಣವನ್ನು ಮಾಡಿದರು. ಬ್ರಾಹ್ಮಣರ ಆರ್ಥಿಕ ಶೋಚನೀಯ ಸ್ಥಿತಿಯನ್ನು ವರ್ಣಿಸಿದರು. ನಿರುದ್ಯೋಗದಿಂದ ಬ್ರಾಹ್ಮಣ ಸುಶಿಕ್ಷಿತ ತರುಣ ರಲ್ಲಿ ಅನೇಕರು ಅನೇಕ ಅನೀತಿಯ ಕಾರ್ಯಗಳಲ್ಲಿ ಸೇರುತ್ತಿದ್ದಾ ರೆಂತಲೂ ಇದು ಸಂಸ್ಕೃತಿಗೆ ವಿಘಾತಕವಾದುದೆಂತಲೂ ತಿಳಿಸಿದ ರು. ಸರಕಾರದವರು ಈಗಲೇ ಈ ಕಡೆಗೆ ಲಕ್ಷಿಸದಿದ್ದರೆ ಮುಂದೆ ತುಂಬಾ ತೊಂದರೆಯಾಗುವ ಸಂಭವವಿದೆಯೆಂತಲೂ ಸೂಚಿಸಿದರು.

ಮಹತ್ವದ ನಿರ್ಣಯ.

ಮರುದಿನ ಹನ್ನೊಂದು ನಿರ್ಣಯಗಳು ಮಾಡಲ್ಪಟ್ಟವು. ಈಗಿನ ಶಿಕ್ಷಣವು ಕೇವಲ ಪರಾವಲಂಬಿಯಾಗಿರುವುದರಿಂದ ಇಂಗ್ಲಿಷ್ ೫ ನೆಯ ತರಗತಿ ಪೂರೈಸಿದನಂತರ ಹೈಸ್ಕೂಲ್ ಶಿಕ್ಷಣದಲ್ಲಿ ಒಂದು ಬೌದ್ಧಿಕ ಇನ್ನೊಂದು ಔದ್ಯೋಗಿಕ ಈ ಪ್ರಕಾರ ಎರಡು ವಿಧದ ಶಿಕ್ಷಣ ಕ್ರಮಗಳು ಪ್ರಾರಂಭವಾಗಬೇಕೆಂತಲೂ, ಬಟ್ಟಿ ಮಾ ಡುವ ಗಿರಣಿಯನ್ನು ಸ್ಥಾಪಿಸಲು ಹತ್ತು ಲಕ್ಷ ರೂ. ಗಳ ಒಂದು ನಿಧಿಯನ್ನು ಕೂಡಿಸಬೇಕೆಂತಲೂ ಇದಕ್ಕೆ ಮಹಾರಾಷ್ಟ್ರ ಬ್ರಾಹ್ಮಣ ಸಹಾಯಕ ಟ್ರಸ್ಟ್ ಎಂಬ ಹೆಸರನ್ನಿಟ್ಟು ಸಂಸ್ಥಾನಿಕರು, ಶ್ರೀ ಮಂತರು ಮೊದಲಾದವರಿಂದ ಈ ಹಣವನ್ನು ಕೂಡಿಸಬೇಕೆಂತಲೂ ಬ್ರಾಹ್ಮಣರು ವ್ಯಾಪಾರ, ಉದ್ಯೋಗ ಒಕ್ಕಲತನಗಳಲ್ಲಿ ಪ್ರವೇ ಶಿಸಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕೆಂತಲೂ ಪುಣೆಯ ಹತ್ತುರ ಬ್ರಾಹ್ಮಣರ ಒಂದು ಮಾದರಿಯ ವಸಾಹತವನ್ನು ನಿರ್ಮಿಸಬೇಕೆಂತಲೂ ಗೊತ್ತುಮಾಡಿದರು.

ಈ ಸಂಬಂಧವಾದ ಬೇರೆ ಬೇರೆ ಕಾರ್ಯಗಳನ್ನು ಮಾಡಲು ತಜ್ಞರೂ ಪ್ರಮುಖರೂ ಆದ ಜನಗಳ ಬೇರೆ ಬೇರೆ ಉಪ ಮಂಡಲ ಗಳನ್ನು ನಿಯಮಿಸಿದರು. ಮುಂದಣ ಪರಿಷತ್ತನ್ನು ಅಹಮ್ಮದ ನಗರದಲ್ಲಿ ಕೂಡಿಸುವುದು ಗೊತ್ತಾಯಿತು.

ಎರಡು ಲಕ್ಷ ರೂ. ಗಳ ದೇಣಿಗೆ.

ಹತ್ತು ಲಕ್ಷ ರೂ. ಕೂಡಿಸಿ ಪ್ರಾರಂಭಿಸತಕ್ಕ ಈ ಮಹತ್ಕಾ ರ್ಯಕ್ಕೆ ಶ್ರೀ ವಿಷ್ಣುಪಂತ ವೇಲಣಕರ ಸಾಂಗಲಿ ಗಜಾನನ ಮಿಲ್ ಯಜಮಾನರು ಎರಡು ಲಕ್ಷ ರೂ. ಗಳ ದೇಣಗಿಯನ್ನು ಕೊಡುವು ದಾಗಿ ತಿಳಿಸಿದರು. ಇವರ ಈ ಉದಾರ ಬುದ್ಧಿಯನ್ನು ಸಭಿಕರು ಅಭಿನಂದಿಸಿ ಆ ಟ್ರಸ್ಟ ಫಂಡಿಗೆ ವೇಲಣಕರ್ ಟ್ರಸ್ಟ ಫಂಡ ಎಂಬ ಹೆಸರನ್ನಿಟ್ಟರು.

ಈ ಹಣವಿನ ವ್ಯವಸ್ಥೆಗಾಗಿ ಒಂದು ಮಂಡಲಿಯು ಏರ್ಪಟ್ಟಿತು. ಹಣವನ್ನು ಕೂಡಿಸುವುದಕ್ಕಾಗಿ ಪ್ರಮುಖರ ಒಂದು ಸಮಿತಿಯು ಏರ್ಪಟ್ಟಿದೆ. ಮಹಾರಾಷ್ಟ್ರದಲ್ಲಿಯ ಪ್ರತಿಯೊಬ್ಬ ಬ್ರಾಹ್ಮಣನೂ ತನ್ನ ಒಂದು ತಿಂಗಳ ಆದಾಯವನ್ನು ಈ ಫಂಡಿಗೆ ಕೊಡಬೇಕಾಗಿ ಸಭೆಯಲ್ಲಿ ಗೊತ್ತಾಗಿದೆ.

ಈ ಪ್ರಕಾರ ಪುಣೆಯಲ್ಲಿ ಕೂಡಿದ ಮಹಾರಾಷ್ಟ್ರ ಬ್ರಾಹ್ಮಣ ಆರ್ಥಿಕ ಪರಿಷತ್ತು ಬಹು ಪರಿಣಾಮಕಾರಿಯಾಗಿಯೇ ಪೂರ್ತಿಗೊಂಡು ಅನ್ಯರಿಗು ಕೂಡಾ ಅನುಕರಣೀಯವಾಗಿ ಪರಿಣಮಿಸಿತು.

ಕೇಸರೀ ಪತ್ರಿಕೆಯ ಅಭಿಪ್ರಾಯ.

ಮಹಾರಾಷ್ಟ್ರ ಬ್ರಾಹ್ಮಣ ಆರ್ಥಿಕ ಪರಿಷತ್ತಿನ ವಿಷಯವಾಗಿ ಪುಣೆಯ ಕೇಸರೀ ಪತ್ರಿಕಾಕರ್ತರು ತಮ್ಮ ಆಗ ಲೇಖನದ ಆದಿಯಲ್ಲಿಯೇ ಹೀಗೆ ಹೇಳಿದ್ದಾರೆ—

" ವಿಶಿಷ್ಟ ವರ್ಗದವರ ಆರ್ಥಿಕ ಪರಿಷತ್ತು ಈ ಪ್ರಕಾರ ಕೂಡಿದುದು ಕೇವಲ ಮಹಾರಾಷ್ಟ್ರದಲ್ಲಿಯೇ ಅಲ್ಲ; ಹಿಂದುಸ್ಥಾನದಲ್ಲಿಯೇ ಇದು ಮೊದಲನೆಯದೆಂದು ಹೇಳಬಹುದು. ಮಹಾರಾಷ್ಟ್ರದ ಬ್ರಾಹ್ಮಣರಲ್ಲಿ ಹೆಚ್ಚುತ್ತಿರುವ ನಿರುದ್ಯೋಗತ್ವವೇ ಇದಕ್ಕೆ ಕಾರಣವು. ಈ ನಿರುದ್ಯೋಗ ರೋಗವು ಅಶಿಕ್ಷಿತ ಮತ್ತು ಸುಶಿಕ್ಷಿತ, ಬ್ರಾಹ್ಮಣ ಮತ್ತು ಅಬ್ರಾಹ್ಮಣ, ಮಹಾರಾಷ್ಟ್ರೀಯ ಮತ್ತು ಮಹಾರಾಷ್ಟ್ರೀಯೇತರ, ಈ ಎಲ್ಲರಿಗೂ ಹೆಚ್ಚುಕಡಿಮೆಯಾಗಿ ಅಂಟಿಕೊಂಡೇ ಇದೆ.

ಆದರೆ ಈ ನಿರುದ್ಯೋಗತ್ವದಲ್ಲಿಯೂ ಜಾತಿಗಳಿವೆಯೆಂಬುದನ್ನು ಮರೆಯಬಾರದು. ಅಶಿಕ್ಷಿತರಲ್ಲಿಯ ನಿರುದ್ಯೋಗತ್ವವೇ ಬೇರೆ. ಸುಶಿಕ್ಷಿತರಲ್ಲಿಯ ನಿರುದ್ಯೋಗತ್ವವನ್ನು ಸುಶಿಕ್ಷಿತರ ಪದ್ಧತಿಯಿಂದಲೇ ನಿವಾರಣೆ ಮಾಡಬೇಕೇ ವಿನಾ ಅಶಿಕ್ಷಿತರ ಪದ್ಧತಿಯಿಂದ ನಿವಾರಣೆ ಮಾಡಲಿಕ್ಕಾಗುವುದಿಲ್ಲ.

ಸುಶಿಕ್ಷಿತರಲ್ಲಿ ಕೂಡಾ ಬ್ರಾಹ್ಮಣರಿಗಾಗುವ ತೊಂದರೆಯು ಅಬ್ರಾಹ್ಮಣ ಸುಶಿಕ್ಷಿತರಿಗಾಗುವ ತೊಂದರೆಗಿಂತ ಭಿನ್ನವಾಗಿಯೂ ತೀವ್ರತರವಾಗಿಯೂ ಇದೆ. ಬ್ರಾಹ್ಮಣ ವರ್ಗವು ರಾಜಕೀಯ ಚಳವಳಿಯಿಂದ ಸರಕಾರದ ಸಿಟ್ಟಿಗೊಳಗಾಗಿದೆ. ಮತ್ತು ತನ್ನ ವಿಶಿಷ್ಟ ಗುಣದಿಂದ ಬ್ರಾಹ್ಮಣೇತರರ ದ್ವೇಷಕ್ಕೂ ಆಹುತಿಯಾಗಿದೆ. ಈ ಪ್ರಕಾರ ಕಲ್ಲಹರಳಿನಂತೆ ಬೇರೆಯಾಗಿ ತೆಗೆದಿಡಲ್ಪಟ್ಟ ಈ ವರ್ಗದ ಮೇಲಿನ ಸಂಕಟ ನಿವಾರಣೆಗಾಗಿ ಬ್ರಾಹ್ಮಣ ವರ್ಗದ ಮುಂದಾಳುಗಳು ಮುಂದರಿದುದೇನೂ ಆಶ್ಚರ್ಯಕರವಲ್ಲ."

---

೧೨ ನೆಯ ಶ್ರೀವಮದ್ವೀರಶೈವ ಮಹಾಸಭೆ
ರಾಯಚೂರ.
ಪ್ರದರ್ಶನ ಶಾಖಾ.

ಮಹಾಸಭೆಯ ಕಾಲಕ್ಕೆ ಪ್ರದರ್ಶನ (ಕಲಾಕೌಶಲ್ಯ ವಸ್ತು ಒಕ್ಕಲತನ) ವನ್ನು ಜರುಗಿಸುವದು ನಿಶ್ಚಯವಾಗಿದ್ದು ಅಂಗಡಿ ಮತ್ತು ದೀವಿಗೆಗಳನ್ನು ಮೊಫತ್ತಾಗಿ ಕೊಡುವದಲ್ಲದೆ ೧-೨ ನಂ ಬರುಗಳಿಗೆ ಬಹುಮಾನ ಕೊಡುವದನ್ನು ಗೊತ್ತುಮಾಡಿದ್ದಾರೆ. ಕಾರಣ ಯಾವತ್ತರೂ ಇದರ ಲಾಭವನ್ನು ಪಡೆಯಬೇಕಾಗಿ ವಿನಂತಿ.

ತಮ್ಮ
ಜೆ. ಅಮರಪ್ಪ ವಕೀಲ
ಅಧ್ಯಕ್ಷ.

ಬಸವಾದಿ ಪ್ರಮುಥರ ನಿಂದೆಗಾಗಿ
ಶಾಸ್ತ್ರಿಗಳು ಕ್ಷಮೆಬೇಡಿದರು.

ಹಿಪ್ಪರಗಿಯ ಶ್ರೀ. ಶಿವಲಿಂಗಯ್ಯ ಶಾಸ್ತ್ರಿ ಎಂಬುವವರು ಮೈದಿರಿಗಿಯ ವೀರಶೈವ ಸಮಾಜದ ಮುಂದಾಳುಗಳೊಡನೆ ಧಾರ್ಮಿಕ ವಾದವಿವಾದ ಮಾಡಿರುವಾಗ ಪೂಜ್ಯ ಶ್ರೀ. ಬಸವೇಶ್ವರ್ಯ,ಜಗದ್ಗುರು ಪ್ರಭುದೇವ ಮತ್ತು ಶ್ರೀ. ಸಿದ್ಧರಾಮೇಶ್ವರರ ಬಗ್ಗೆ ಅನೇಕ ಅಶ್ಲೀಲ ಅಪಶಬ್ದಗಳನ್ನುಪಯೋಗಿಸುತ್ತ ಅವರ ನಿಂದೆ ಮಾಡಲಿಕ್ಕೆ ಪ್ರಾರಂಭಿಸಿದರು. ಆಗ ಸಮಾಜದಲ್ಲಿ ಭಯಂಕರ ಗಡಬಿಡಿಯೆದ್ದಿತು. ಈ ಬಗ್ಗೆ ಬಹಳ ಹೊತ್ತಿನ ವರೆಗೆ ವಾದವಿವಾದವಾಗಿ ಕೊನೆಗೆ ಶಾಸ್ತ್ರಿಗಳು ಸೋತರು. ಆಗ ಮೈದರಗಿ,ವೀರಶೈವ ಮಹಾಜನರು ಶಾಸ್ತ್ರಿಗಳು ಪ್ರಮಥ ನಿಂದೆ ಮಾಡಿದುದರಿಂದ ಕ್ಷಮಾಪತ್ರ ಬರೆದುಕೊಡಬೇಕೆಂದು ತಿಳಿಸಿದರು. ಇದಕ್ಕೆ ಶಾಸ್ತ್ರಿಗಳು ಒಪ್ಪಿ ಶ್ರೀ. ಬಸವೇಶ್ವರನ ಭಾವಚಿತ್ರದ ಸಮಕ್ಷಮ ಈ ಪ್ರಕಾರ ಕ್ಷಮಾಪತ್ರ ಬರೆದು ಕೊಟ್ಟಿದ್ದಾರೆ- ಈ ಶಾಸ್ತ್ರಿಗಳಿಗೆ ಪುನಃ ಎಂದೂ ಪ್ರಮಥ ನಿಂದೆಮಾಡದಂತೆ ಎಚ್ಚರಿಕೆ ಕೊಡಲಾಗಿದೆ. ಒಂದುವೇಳೆ ಮಾಡಿದ್ದಾದರೆ ಕಟ್ಟಳೆಯ ವ್ಯಾಜ್ಯ ಹಾಕಲಾಗುವದೆಂದು ತಿಳಿಸಿದೆ.

ಶಾಸ್ತ್ರಿಗಳು ಬರೆದುಕೊಟ್ಟ ಕ್ಷಮಾಪತ್ರ.

ಶ್ರೀ ಗುರುಭಕ್ತ ಪರಾಯಣರಾದ ಶ್ರೀ ವೀರಯ್ಯ ಸ್ವಾಮಿ ಬಾಜಾರಮಠ, ಶ್ರೀ ಕಲ್ಲಯ್ಯ ಬಿಜ್ಜರಗಿ, ಶ್ರೀ ವೀರಪ್ಪಾ ಲೋಣಿ ಶ್ರೀ ಚನ್ನಪ್ಪಾ ತೋಟದ ಶ್ರೀ ಶಾಂತಲಿಂಗಪ್ಪಾ ಸಾಬಾ, ಶ್ರೀ ಚಂದ್ರಾಮಪ್ಪಾ ಕೇಸೂರ, ಶ್ರೀ ಮಲ್ಲಿಕಾರ್ಜುನಪ್ಪಾ ಪಡಸಲಿಗಿ ಶ್ರೀ ಗುರಲಿಂಗಪ್ಪಾ ಶೀಲವಂತ ಮೊದಲಾದ ವೀರಶೈವ ಮುಂದಾಳುಗಳ ಸನ್ನಿಧಿಗೆ.

ಈ ಕೆಳಗೆ ಸಹಿಮಾಡಿದ ನಾನು ಶ್ರೀ ಶಿವಲಿಂಗಯ್ಯ ರೇವಣಸಿದ್ಧಯ್ಯ ಶಾಸ್ತ್ರಿ ಮುಕ್ಕಾಮ ಹಿಪ್ಪರಗಿ ಸದ್ಯದ ಮುಕ್ಕಾಮ ಮೈದರಗಿ, ಬರಕೊಡುವ ಕ್ಷಮಾಪತ್ರವೇನಂದರೆ—

ತಾ|| ೧೧-೫-೩೬ ನೆಯ ದಿವಸ ನಿಮ್ಮ ಸಮಕ್ಷಮ ವೀರಶೈವ ಧರ್ಮದ ಚರ್ಚೆ ಹೊರಟಿರುವಾಗ ಪರಮಪೂಜ್ಯ ಶ್ರೀ ಬಸವೇಶ್ವರ ಮಹಾರಾಜ, ಶ್ರೀ ಜಗದ್ಗುರು ಪ್ರಭುದೇವ ಮತ್ತು ಶ್ರೀ ಸಿದ್ಧರಾಮೇಶ್ವರ ಇವರುಗಳ ತತ್ವ ಸಂಬಂಧವಾಗಿ ಮತ್ತು ಅವರ ವಿಷಯವಾಗಿಯೂ ನಿಷ್ಕಾರಣವಾಗಿ ಅಪಶಬ್ದಗಳನ್ನು ಪ್ರಯೋಗಿಸಿದೆನು. ಇದಕ್ಕಾಗಿ ಈಗ ನನಗೆ ಪಶ್ಚಾತ್ತಾಪವೆನಿಸಿ ಈ ಲೇಖದ ಮೂಲಕ ಈ ಪ್ರಕಾರ ಕ್ಷಮೆ ಬೇಡಿಕೊಳ್ಳುತ್ತಿದ್ದೇನೆ.

ಅಪಶಬ್ದಗಳನ್ನುಪಯೋಗಿಸಿದ್ದಕ್ಕಾಗಿ ಶ್ರೀ. ಬಸವೇಶ್ವರನ ಫೋಟೋದ ಸಮಕ್ಷಮ ನಾನು ಅಂತಃಕರಣ ಪೂರ್ವಕವಾಗಿ ನಿಮ್ಮ ಮುಂದೆ ಕ್ಷಮೆ ಬೇಡಿಕೊಳ್ಳುತ್ತೇನೆ. ಇನ್ನು ಮೇಲೆ ಈ ಪೂಜ್ಯರ ವಿಷಯವಾಗಿ ನಾನು ಎಂದೆಂದೂ ಅಪಶಬ್ದಗಳನ್ನು ಪ್ರಯೋಗಿಸುವದಿಲ್ಲ; ಎಂದೆಂದೂ ನಿಂದೆಯನ್ನು ಮಾಡುವದಿಲ್ಲ. ಆ ಪೂಜ್ಯರ ಬಗ್ಗೆ ಪೂಜ್ಯಬುದ್ಧಿಯನ್ನು ತಾಳಿ ನಾನು ಕ್ಷಮೆ ಬೇಡುತ್ತೇನೆ.

ತಾ|| ೧೧-೫-೩೬ ಶಾಸ್ತ್ರಿಗಳ ಸಹಿ.
(ಕನ್ನಡದಲ್ಲಿ)

ವೀರಶೈವ ತರುಣರ ಸಂಘಗಳ

ಪ್ರಾತಿನಿಧಿಕ ಸಭೆ, ಹುಬ್ಬಳ್ಳಿ.

—:(ಇದೇ ಮೇ ತಿಂಗಳ ೨೮-೨೯ನೆಯ ಗುರುವಾರ, ಶುಕ್ರವಾರ):—

ತರುಣರಲ್ಲಿ ಬಿನ್ನಹ.

ವೀರಶೈವ ಸಮಾಜವು ಕರ್ನಾಟಕ, ಮಹಾರಾಷ್ಟ್ರ, ತಮಿಳು, ತೆಲಗು ಮುಂತಾದ ಅನೇಕ ಪ್ರಾಂತಗಳಲ್ಲಿ ಹಬ್ಬಿಕೊಂಡಿರುತ್ತದೆ. ಪರಸ್ಪರರ ಸಂಬಂಧವು ಸಮಾಜದ ಉನ್ನತಿಗಾಗಿ ಅತ್ಯಾವಶ್ಯವಾಗಿದೆ. ಸಡಲಿದ ಸಮಾಜದ ಕಟ್ಟಡವನ್ನು ಭದ್ರಪಡಿಸಬೇಕಾದರೆ ಪರಸ್ಪರ ಸಹಕಾರವು ಬೆಳೆಯಬೇಕು; ವಿಚಾರಗಳು ವಿನಿಮಯವಾಗಬೇಕು. ಕುಂದು ಕೊರತೆಗಳನ್ನು ನಿವಾರಿಸುವದಕ್ಕೋಸ್ಕರ ಒಂದು ಸ್ಥಳದಲ್ಲಿ ಎಲ್ಲರೂ ಕೂಡಬೇಕು. ಅಂದರೇನೇ ನಮ್ಮ ಸಮಾಜದಲ್ಲಿ ಸಂಘಟನಾ ಶಕ್ತಿಯು ಬೆಳೆಯುವದು.

ಸಂಘಶಕ್ತಿಯು ಬಲವಾದ ಆಯುಧವು. ಸಹಕಾರವು ಸಂಘಶಕ್ತಿಯ ಬೀಜ. ಈ ಸಂಘಶಕ್ತಿಯ ವೃಕ್ಷದ ಫಲವನ್ನು ನಮ್ಮ ಸಮಾಜದವರು ಭೋಗಿಸಬೇಕಾದರೆ ಸಮಾಜದ ತರುಣರು ಸಹಕಾರ ಬೀಜವನ್ನು ಬಿತ್ತಬೇಕು. ಹೀಗೆ ಪ್ರೇಮಲತೆಯನ್ನು ಬೆಳೆಸಿ ತರುಣರೆಲ್ಲರೂ ಒಕ್ಕಟ್ಟಿನಿಂದ ಕಾರ್ಯರಂಗಕ್ಕೆ ಇಳಿದರೆ ಯಾವ ಸಮಾಜವು ತನ್ನ ಉನ್ನತಾವಸ್ಥೆಯ ಶಿಖರವನ್ನು ಮುಟ್ಟುವದಿಲ್ಲ? ತರುಣರೇ ನೀವು ಭಾವೀ ಸಮಾಜದ ಆಧಾರ ಸ್ತಂಭಗಳಲ್ಲವೇ?

ನಮ್ಮ ಸಮಾಜದಲ್ಲಿ ಅನೈಕ್ಯತೆಯು ಹೆಚ್ಚುತ್ತ ನಡೆದಿದೆ. ಪಕ್ಷಗಳೂ ಪಂಗಡಗಳೂ ಬೆಳೆಯಹತ್ತಿವೆ. ಇಂತಹ ಅನೈಕ್ಯ ಪಕ್ಷ ಪಂಗಡಗಳ ಸಾಮ್ರಾಜ್ಯದಲ್ಲಿ ವಿಧಾಯಕ ಕಾರ್ಯಕ್ರಮವು ಅಸಾಧ್ಯವಾಗಿದೆ. ಧರ್ಮ ಬೋಧಕರು ಮತದ ತತ್ವಗಳನ್ನು ಭಿನ್ನ ಭಿನ್ನವಾಗಿ ಬೋಧಿಸಹತ್ತಿದ್ದಾರೆ. ಯಾವ ಬೋಧೆಗೆ ಮಾನ್ಯ ಮಾಡಬೇಕೆಂದು ಮುಂಗಾಣದೆ ಸಮಾಜವು ಭಿನ್ನ ಭಿನ್ನ ಪಕ್ಷಗಳ ಕಡೆಗೆ ಲಕ್ಷ್ಯ ಹಾಕಿದೆ. ಹೀಗಾಗಿ ಸಮಾಜವು ಅಂಧಃಕಾರದಲ್ಲಿ ಮುಳುಗಿದೆ. ಅಸ್ತವ್ಯಸ್ತವಾಗಿರುವ ಈಗಿನ ಸಮಾಜವನ್ನು ಸುವ್ಯವಸ್ಥಿತವಾಗಿ ಮಾಡಬೇಕಾಗಿರುವುದು.

ಪ್ರತಿಯೊಬ್ಬನು ತನ್ನ ಜೀವನಾಧಾರಕ್ಕೆ ಯಾವದಾದರೊಂದು ಕಾಯಕವನ್ನು ಮಾಡಲೇಬೇಕು. ಉದ್ಯೋಗವು ಕುಲದ ಲಕ್ಷಣವಲ್ಲ. ಉದ್ಯೋಗದಿಂದಾಗಲಿ ಜನ್ಮದಿಂದಾಗಲಿ ಯಾರೂ ಮೇಲು ಕೀಳಾಗುವುದಿಲ್ಲ. ಸ್ವಾವಲಂಬನವೇ ವೀರಶೈವ ಧರ್ಮದ ಅಡಿಗಲ್ಲು. ಆದ್ದರಿಂದ ತರುಣರೇ ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸಿ ಶಾಂತತೆಯನ್ನು ನೆಲೆಗೊಳಿಸಿ ನಮ್ಮ ಧರ್ಮದ ಉದಾತ್ತವಾದ ತತ್ವಗಳ ಜ್ಯೋತಿಯನ್ನು ವಿಶ್ವಕ್ಕೆಲ್ಲ ಬೆಳಗಿ ನಮ್ಮ ಸಮಾಜವು ಆದರ್ಶವಾಗುವಂತೆ ಮಾಡುವುದು ನವ್ಮೆಲ್ಲರ ಕರ್ತವ್ಯವಾಗಿದೆ.

ಎಮ್. ಜಿ. ಹಂದ್ರಾಳ ಬಿ.ಎ. ವ್ಹಿ. ಕೆ. ಜವಳಿ.
ಕಾರ್ಯದರ್ಶಿಗಳು

ಬಿ. ಎನ್. ಮುನವಳ್ಳಿ. ಬಿ. ಎ. ಎಲ್. ಎಲ್. ಬಿ.
ಸ್ವಾಗತ ಸಂಘಾಧ್ಯಕ್ಷ

ಬ್ರಾಹ್ಮಣರು ಮುಂದೇನು ಮಾಡಬೇಕು?

ಪುಣೆಯಲ್ಲಿ ಕಳೆದ ವಾರ ಕೂಡಿದ ಮಹಾರಾಷ್ಟ್ರ ಬ್ರಾಹ್ಮಣ ಆರ್ಥಿಕ ಪರಿಷತ್ತಿನಲ್ಲಿ ಶ್ರೀ. ಲ. ಬ. ಭೋಪಟಕರ ಇವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು.—

"ನನ್ನ ಬಂಧುಗಳಾದ ಬ್ರಾಹ್ಮಣ ತರುಣರೇ? ನಿಮ್ಮ ಮುಂದಿನ ಸ್ಥಿತಿಯನ್ನು ಸರಿಯಾಗಿ ಯೋಚಿಸಿರಿ. ಇಲ್ಲದಿದ್ದರೆ ಹೊಟ್ಟಿಗಿಲ್ಲದೆ ಸಾಯುವ ಪ್ರಸಂಗ ನಿಮ್ಮ ಮೇಲೆ ಬರಬಹುದು. ನಾನು ೧೯೦೫ ರಿಂದ ಸಾರ್ವಜನಿಕ ಕಾರ್ಯದಲ್ಲಿ ನಿರತನಾಗಿದ್ದೇನೆ. ನಮ್ಮಲ್ಲಿ ಸಾಂಪತ್ತಿಕ ಸ್ಥಿತಿಯಿದ್ದ ವಿನಾ ನಮ್ಮ ತ್ಯಾಗಕ್ಕೆ ಮಹತ್ವವೇ ಬರುವದಿಲ್ಲವೆಂಬುದು ನನ್ನ ಅನುಭವ ಸಿದ್ಧಾಂತ ವಾಕ್ಯವು.

ನಿಮ್ಮ ಸಾಂಪತ್ತಿಕ ಸ್ಥಿತಿಯ ಮೇಲಿಂದಲೇ ನಿಮ್ಮ ಸ್ವಾರ್ಥತ್ಯಾಗಕ್ಕೆ ಬೆಲೆಬರುತ್ತದೆಂಬುದನ್ನು ನೆನಪಿನಲ್ಲಿಡಿರಿ. ನೀವು ದೇಶಸೇವೆಗಾಗಿ ಸರ್ವಸ್ವವನ್ನು ತ್ಯಾಗಮಾಡಿದರೂ ನೀವು ಬಡವರಾಗಿದ್ದರೆ ಅದೇನೂ ಗಣನೆಗೆ ಬರುವದಿಲ್ಲ. ಆದರೆ ಮೂರು ಲಕ್ಷ ರೂ. ಗಳ ರಾಜಭವನದಲ್ಲಿರುವವರು ಖಾದಿ ತೊಟ್ಟುಕೊಂಡು ಹೊರಗೆ ಬಂದರೆಂದರೆ ಅವರ ಸ್ವಾರ್ಥತ್ಯಾಗಕ್ಕೆ ಸೀಮೆಯೇ ಇಲ್ಲದಂತಾಗುತ್ತದೆ.

ತನ್ನ ಪತ್ನಿಯ ಆರೋಗ್ಯಕ್ಕೋಸ್ಕರ ಆಕಾಶಯಾನದಿಂದ ಯುರೋಪಕ್ಕೆ ಹೋಗುವಂತಹವರು ದೇಶ ಕಾರ್ಯದಲ್ಲಿ ಸೇರಿದ್ದರಿಂದರೇನೇ ಅವರ ಸ್ವಾರ್ಥತ್ಯಾಗವು ಗಣನೆಗೆ ಬರುತ್ತದೆ.

ನನ್ನ ಹೆಂಡತಿಯು ರೋಗಿಯಾಗಿದ್ದಳು. ಆವಳನ್ನು ಯುರೋಪಕ್ಕೆ ಕರೆದುಕೊಂಡು ಹೋಗಬೇಕೆಂತಲೂ ನಾನು ಯೋಚಿಸಿದ್ದೆ. ಆದರೆ ಅಷ್ಟು ಹಣವು ನನ್ನಲ್ಲಿಲ್ಲದಿದ್ದುದರಿಂದ ನನ್ನ ತ್ಯಾಗದ ಸದ್ದೇ ಇಲ್ಲದಾಯಿತು. ಕಳೆದ ಹದಿನೈದು ವರ್ಷಗಳಿಂದ ಮಹಾರಾಷ್ಟ್ರವು ರಾಜಕಾರಣದಲ್ಲಿ ಹಿಂದೆ ಬಿದ್ದಿದೆಯೆಂದು ಎಲ್ಲ ಕಡೆಗೂ ಕೂಗು. ಮಹಾರಾಷ್ಟ್ರವೇನೂ ರಾಜಕಾರಣದಲ್ಲಿ ಹಿಂದುಳಿದಿಲ್ಲ. ಆದರೆ ಅದು ಬಹು ದರಿದ್ರ ದೇಶ. ಸಂಪತ್ತಿನ ಬಲವಿಲ್ಲದೆ ಈಗಿನ ತ್ಯಾಗದ ರಾಜಕಾರಣವನ್ನು ಮಹಾರಾಷ್ಟ್ರವು ನಡೆಯಿಸುವಂತಿಲ್ಲ. ಆದಕಾರಣ ಬ್ರಾಹ್ಮಣರು ಮೊದಲು ಶ್ರೀಮಂತರಾಗಬೇಕು. ಇನ್ನು ಮೇಲೆ ಕೆಲವು ವರ್ಷಗಳ ವರೆಗಾದರೂ ಬ್ರಾಹ್ಮಣರು ರಾಜಕಾರಣದಿಂದ ಸಂಪೂರ್ಣ ಅಲಿಪ್ತರಾಗಿರಬೇಕು.

ಕಳೆದ ೧೯೩೦ ನೆಯ ಇಸವಿಯ ಶಾಸನ ಭಂಗದಿಂದ ಮಹಾರಾಷ್ಟ್ರದ ಮೂರು ಸಾವಿರ ಬ್ರಾಹ್ಮಣ ತರುಣರು ತಮ್ಮ ಆಯುಷ್ಯವನ್ನೇ ಕಷ್ಟಕ್ಕೀಡು ಮಾಡಿಕೊಂಡು ಕಾರಾಗೃಹವಾಸಿಗಳಾದರು. ಅವರಲ್ಲಿ ೫ ಜನ ಮುಸಲ್ಮಾನ್ ೫೦ ಜನ ಬ್ರಾಹ್ಮಣೇತರ ತರುಣರಾಗಲಿ ಇರಲಿಲ್ಲ. ಈ ಬ್ರಾಹ್ಮಣ ತರುಣರ ತ್ಯಾಗವೃತ್ತಿಯನ್ನು ಅಭಿನಂದಿಸುವದು ಹಾಗಿರಲಿ. ಇವರನ್ನು ದ್ವೇಷಿಸುವುದೇ ಹೆಚ್ಚಿತು. ಆದ ಕಾರಣ ನಿಮ್ಮ ಮಕ್ಕಳು ಮರಿಗಳಿಗೆ ಈ ರಾಜಕಾರಣದಲ್ಲಿ ಬೀಳಬೇಡಿರೆಂದು ಹೇಳಿರಿ. ಅವರು ಮೊದಲು ತಮ್ಮ ಜೀವನವು ಶ್ರೇಷ್ಠ ತರದ್ದಾಗುವಂತೆ ಮಾಡಿಕೊಳ್ಳಲು ಪ್ರಯತ್ನಿಸಲಿ.

ಪಂ. ಜವಾಹರಲಾಲರ ವಿಚಾರ ಸರಣಿ.

೨೧ ಪ್ರಮುಖರ ವಿರೋಧ.

ರಾಷ್ಟ್ರೀಯ ಸಭಾ ಪತಿಗಳಾದ ಪಂಡಿತ ಜವಾಹರಲಾಲರು ಕಳೆದ ೧೫ ನೆಯ ತಾರೀಖಿನ ದಿವಸ ಮುಂಬೈಗೆ ಬಂದನಂತರ ಮುಂಬೈ ಪಟ್ಟಣವು ತನ್ನ ಘನತೆಗೆ ತಕ್ಕಂತೆ ಪಂಡಿತಜಿಯವರನ್ನು ಪ್ರಚಂಡ ಸ್ವಾಗತದಿಂದ ಗೌರವಿಸಿತು. ಪಂಡಿತಜಿಯವರು ಆರು ದಿವಸ ಅವಿಚ್ಛಿನ್ನವಾಗಿ ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ನಡೆಯಿಸಿ ತಮ್ಮ ವಿಚಾರಣೆಯನ್ನು ರಾಷ್ಟ್ರಕ್ಕೆ ವಿಶದೀಕರಿಸಿದರು.

ಪಂ. ಜವಾಹರಲಾಲರು.

ತಾ. ೨೧ ನೆಯ ದಿವಸ ಪುಣೆ ಪಟ್ಟಣಕ್ಕೆ ಆಗಮಿಸಲು ಅಲ್ಲಿಯು ಕೂಡಾ ಅತ್ಯಂತ ಪ್ರೇಮಾದರಗಳಿಂದ ಈ ರಾಷ್ಟ್ರವೀರರನ್ನು ಬರ ಮಾಡಿಕೊಂಡರು. ಅಲ್ಲಿಯು ಕೂಡಾ ಅನೇಕರ ಪ್ರಶ್ನೆಗಳಿಗೆ ಪಂ. ಜವಾಹರಲಾಲರು ಕೊಟ್ಟ ಉತ್ತರಗಳ ಮೇಲಿಂದ ಅವರ ವಿಚಾರಗಳು ಜನಾಂಗಕ್ಕೆ ಸ್ಪಷ್ಟವಾಗಿ ಗೊತ್ತಾದವು.

ಖಾದಿ ಮತ್ತು ಪಂಡಿತಜಿ.

ತಾ. ೧೪ ನೆಯ ದಿವಸ ಮುಂಬೈ ಕಾಳಬಾದೇವಿ ಖಾದಿ ಭಾಂಡಾರಕ್ಕೆ ಪಂ. ಜವಾಹರಲಾಲರು ಹೋಗಿದ್ದರು. ಆಗ ಅಲ್ಲಿ ಹೇಳಿದುದೇನೆಂದರೆ—

" ಕೇವಲ ಖಾದಿಯಿಂದ ಹಿಂದುಸ್ಥಾನದ ದಾರಿದ್ರ್ಯವು ನಿವಾರಣೆಯಾಗುವುದಿಲ್ಲ. ನೂಲುವುದರಿಂದ ಅಥವಾ ನೇಯುವುದರಿಂದ ಒಕ್ಕಲಿಗರಿಗೆ ದೊರೆತ ಹೆಚ್ಚಿನ ಹಣವು ಅವರಲ್ಲುಳಿಯದೆ ಜಮೀನದಾರರಿಗೆ ಹೋಗುತ್ತದೆಂದು ಸಂಯುಕ್ತ ಪ್ರಾಂತದಲ್ಲಿಯ ಅನುಭವದಿಂದ ಗೊತ್ತಾಗಿದೆ. ಖಾದಿಯು ಕಾಂಗ್ರೆಸ್ ಕೆಲಸಗಾರರ ಉಡುಪೆಂದು ತಿಳಿಯಲ್ಪಡುತ್ತಾ ಇದೆ. ಖಾದಿ ಧರಿಸುವುದರಿಂದ ಆತನು ಯಾವ ಪಕ್ಷದ ಮನುಷ್ಯನೆಂಬುದೂ ಗೊತ್ತಾಗುವುದೇನೋ ನಿಜ.

ಖಾದಿ ಕಾರ್ಯ ನಿರ್ವಾಹಕರು ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಯಾಂತ್ರಿಕ ಪ್ರಗತಿಯ ಕಡೆಗೆ ಲಕ್ಷಿಸಬೇಕು. ಯಾಂತ್ರಿಕ ಪ್ರಗತಿಯಿಂದ ಅಹಿತಕ್ಕಿಂತಲೂ ಹಿತವೇ ಹೆಚ್ಚಾಗುತ್ತದೆಂದು ನನಗೆ ತೋರುತ್ತದೆ."

ಆದಿಜನ ಮತ್ತು ಪಂಡಿತಜಿ.

ತಾ. ೧೭ ನೆಯ ದಿವಸ ಮುಂಬೈ "ರಾಷ್ಟ್ರೀಯ ಹರಿಜನ" ರ ಪರವಾಗಿ ಪಂಡಿತ ಜವಾಹರಲಾಲರಿಗೆ ಒಂದು ವಿಜ್ಞಾಪನಾ ಪತ್ರಿಕೆಯು ಕೊಡಲ್ಪಟ್ಟಿತು. ಆಗ ಪಂಡಿತಜಿಯವರು ಹೀಗೆ ಹೇಳಿದರು.—

"ಮುಂಬೈ ಹರಿಜನರು ರಾಷ್ಟ್ರೀಯ ಕಾರ್ಯಕ್ಕೆ ಸಹಾಯ ಕರಾಗಿರುವದು ಸಂತೋಷಕರವಾದುದು. ಹರಿಜನರಿಗಾಗಿ ನಾನು ಹೆಚ್ಚು ಕಾಲ ಕಳೆಯುತ್ತಾ ಇಲ್ಲವೆಂದು ನೀವು ಹೇಳಿರುವಿರಿ. ನನ್ನ ಮುಂದಿರತಕ್ಕ ಮಹತ್ವವಾದ ಪ್ರಶ್ನೆಯು ಬಿಡಿಸಲ್ಪಟ್ಟರೆ ನಿಮ್ಮ ಪ್ರಶ್ನೆಯು ಸುಲಭದರಲ್ಲಯೇ ಬಿಡಿಸಲ್ಪಡುವುದು."

ಪಂಡಿತಜಿ ಮತ್ತು ಜಾತಿ ನಿರ್ಣಯ.

ಅಖಿಲ ಭಾರತ ಟ್ರೇಡ್ ಯುನಿಯನ್ ಕಾಂಗ್ರೆಸ್ಸಿನ ೧೫ ನೆಯ ಅಧಿವೇಶನವು ಮುಂಬೈಯಲ್ಲಿ ಕಳೆದ ೧೭ ನೆಯ ತಾರೀಖಿನ ದಿನ ಕೂಡಿದ್ದಿತು. ಆಗ ಪಂ. ಜವಾಹರಲಾಲರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು.—

"ಜಾತಿ ನಿರ್ಣಯವು ಮೂರ್ಖತನದ್ದು ಮತ್ತು ತ್ಯಾಜ್ಯವಾದುದು ಆಗಿದೆ. ಇದನ್ನು ವಿರೋಧಿಸುವದಕ್ಕಾಗಿ ಪ್ರಯತ್ನಿಸುವದೆಂದರೆ ಶಕ್ತಿಯ ಅಪವ್ಯಯವನ್ನು ಮಾಡುವಂತೆಯೇ ಸರಿ. ಸ್ವರಾಜ್ಯ ಪ್ರಾಪ್ತಿಯೇ ನಮ್ಮ ಮುಖ್ಯ ಗುರಿಯು. ಅದು ದೊರೆತರೆ ಜಾತಿ ನಿರ್ಣಯವು ತಾನಾಗಿಯೇ ಹೋಗುತ್ತದೆ."

ಹೊಸ ರಾಜ್ಯಘಟನೆ.

"ಮುಂದೆ ಬರಲಿರುವ ರಾಜ್ಯಘಟನೆಯು ಅತ್ಯಂತ ತ್ಯಾಜ್ಯವಾದುದಾಗಿದೆ. ಅದರಲ್ಲಿ ನಮ್ಮ ಒಂದಾದರೂ ಅಪೇಕ್ಷೆಯು ನೆರವೇರಿಲ್ಲ. ರಾಜ್ಯಘಟನೆಯನ್ನು ಹೇಗೆ ತೆಗೆದೊಗೆಯಬೇಕೆಂಬುದೇ ಪ್ರಶ್ನೆಯಾಗಿದೆ. ರಾಷ್ಟ್ರೀಯ ಸಭೆಯು ಇನ್ನೂ ಇದನ್ನು ನಿರ್ಣಯಿಸಿಲ್ಲ.

ರಾಷ್ಟ್ರೀಯ ಸಭೆಯು ಅಧಿಕಾರಗಳನ್ನು ಸ್ವೀಕರಿಸಿದ್ದಾದರೆ ಸರಕಾರದ ಪದ್ಧತಿಯನ್ನು ರಾಷ್ಟ್ರೀಯ ಸಭೆಯು ಒಪ್ಪಿಕೊಂಡಿತೆಂಬ ತಪ್ಪು ತಿಳುವಳಿಕೆಯುಂಟಾಗುವ ಸಂಭವವಿದೆ." ಎಂಬುದಾಗಿ ಈ ಭಾಷಣದಲ್ಲಿ ಹೇಳಿದರು.

"ಭಾಯಿ" ಜವಾಹರಲಾಲರು.

ಪಂ. ಜವಾಹರಲಾಲರು ತಮಗೆ **ಪಂಡಿತ** ಎಂಬುದಾಗಿ ಹೇಳದೆ **ಭಾಯಿ** ಎಂಬುದಾಗಿ ಸಂಬೋಧಿಸಬೇಕೆಂತಲೂ ತಮ್ಮ ಇಚ್ಛೆಯನ್ನು ಪ್ರದರ್ಶಿಸಿದರು.

ಧನಿಕ ಸ್ತ್ರೀಯಳ ಕೆಲಸ.

ಪುಣೆಯಲ್ಲಿ ಪಂ. ಜವಾಹರಲಾಲರಿಗೆ ಅನೇಕರು ಪ್ರಶ್ನೆಗಳನ್ನು ಮಾಡಿದಾಗ ಗ್ರಾಮೋದ್ಧಾರದ ಕಾರ್ಯವು ಧನಿಕ ಸ್ತ್ರೀಯಳ ಕೆಲಸದಂತಿದೆಯೆಂದು ತಾವು ಹೇಳಿದುದು ನಿಜವೆಂತಲೂ ಆದನ್ನು ಅಲ್ಲಗಳೆಯಲು ಹಾಗೆ ಹೇಳಿರದೆ ಬೇರೆ ಕೆಲಸವಿಲ್ಲದವರು ಆ ಕಾರ್ಯವನ್ನು ಕೈಕೊಳ್ಳತಕ್ಕದ್ದೆಂಬುದಕ್ಕಾಗಿ ಹಾಗೆ ಹೇಳಿದ್ದೇನೆಂತಲೂ ತಿಳಿಸಿದರು. ಈಗಿನ ಯಾಂತ್ರಿಕ ಯುದ್ಧೋಪಕರಣಗಳ ಕಾಲದಲ್ಲಿ ಹಿಂಸೆಯಿಂದ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯುವುದು ಶಕ್ಯವಿಲ್ಲವೆಂತಲೂ ತಿಳಿಸಿದರು.

ವಿರೋಧ ಪ್ರದರ್ಶನ ಪತ್ರಿಕೆ

ಪಂ. ಜವಾಹರಲಾಲರ ಸಮತಾವಾದಕ್ಕೆ ವಿರೋಧವನ್ನು ವ್ಯಕ್ತಗೊಳಿಸಲು ಮುಂಬೈಯಿಯ ಸರ್ ನೌರೋಜಿ ಸಕಲಾತವಾಲಾ, ಸರ್. ಪುರುಷೋತ್ತಮದಾಸ ಠಾಕುರದಾಸ, ಸರ್. ಚಿಮಣಲಾಲ ಸೆಟಲವಾಡ ಮೊದಲಾದ ೨೧ ಪ್ರಮುಖರು ಒಂದು ಪತ್ರಿಕೆಯನ್ನು ಪ್ರಕಟಿಸಿದ್ದಾರೆ.

ಮಹಾರಾಷ್ಟ್ರೀಯ ಬ್ರಾಹ್ಮಣರು ನೈಸರ್ಗಿಕವಾಗಿಯೇ ದೇಶಭಕ್ತರಿರುತ್ತಾರೆ. ಬಾಹ್ಮಣನು ಸರಕಾರಿ ನೌಕರನಿದ್ದರೂ ಆತನ ಅಂತಃಕರಣವನ್ನು ನೀವು ಪರಿಶೋಧಿಸಿದರೆ ಆತನು ದೇಶಭಕ್ತ ನಿದ್ದಂತೆಯೇ ನಿಮಗೆ ತೋರದಿರಲಾರದು."





ಶಾ. ಶ. ೧೮೫೮ ನೆಯ ಜ್ಯೇಷ್ಠ ಶು|| ೫ ಸೋಮವಾರ.

ವೀರಶೈವ ಮಹಾಸಭೆಯು ಪರಿಣಾಮಕಾರಿಯಾಗುವದೆಂದು?

ಅಖಿಲ ಭಾರತ ವೀರಶೈವ ಮಹಾಸಭೆಯು ಜನ್ಮವೆತ್ತಿ ೩೨ ವರುಷಗಳಾದವಷ್ಟೆ. ಅದು ಇನ್ನೂ ಪರಿಣಾಮಕಾರಿಯಾಗಿ ಯಾಕೆ ಪರಿಣಮಿಸಿಲ್ಲ? ಕಳೆದ ೩೨ ವರುಷಗಳಲ್ಲಿ ೧೨ ಸಾರೆ ಮಾತ್ರವೇ ಅದರ ಅಧಿವೇಶನಗಳು ಕೂಡಿದುದೇಕೆ? ಮಹಾಸಭೆ ಕೂಡಿದಾಗ ಗೊತ್ತಾದ ನಿರ್ಣಯಗಳಾದರೂ ಏಕೆ ಆಚರಣೆಯಲ್ಲಿ ಬರುತ್ತಾ ಇಲ್ಲ? ಎಂಬ ಸಂಗತಿಗಳು ಅತ್ಯಂತ ಮಹತ್ವವಾದವುಗಳೇ ಆಗಿವೆ.

ಇಂತಹ ಸಭೆ ಸಮ್ಮೇಲನಗಳ ಪ್ರಯೋಜನವು ತಿಳಿಯುವುದಾಗಲಿ ಮತ್ತು ಅವುಗಳಿಂದ ಪ್ರಯೋಜನವನ್ನು ಹೊಂದುವುದಾಗಲಿ ಆಧುನಿಕ ಶಿಕ್ಷಣ ಹೊಂದಿದವರಿಗೇನೇ ಹೆಚ್ಚು ಶಕ್ಯವಿದೆಯೆಂಬುದನ್ನು ನಾವು ಮರೆಯಕೂಡದು. ಇಂತಹ ಸುಶಿಕ್ಷಿತರ ಸಂಖ್ಯೆಯು ಅನ್ಯ ಸುಧಾರಿಸಿದ ಸಮಾಜಗಳಿಗೆ ಹೋಲಿಸಿ ನೋಡಿದರೆ ನಮ್ಮ ಸಮಾಜದಲ್ಲಿ ಕಡಿಮೆಯಿದೆ.

ನಿಜ ಸ್ಥಿತಿ.

ಈ ಕಡಿಮೆ ಸಂಖ್ಯೆಯುಳ್ಳ ಸುಶಿಕ್ಷಿತರಲ್ಲಿಯೇ ಮೂರು ಮುಖ್ಯ ವಿಭಾಗಗಳಾಗಿವೆ. ಕೆಲವರು ಸರಕಾರಿ ಅಧಿಕಾರಗಳಲ್ಲಿರುವರು. ಕೆಲವರು ಮುನಸಿಪಾಲ್ಟಿ, ಲೋಕಲ್‌ಬೋರ್ಡ ಮೊದಲಾದ ಸ್ಥಳೀಯ ಸಂಸ್ಥೆಗಳ ಕಾರ್ಯಗಳಲ್ಲಿ ಆಸಕ್ತರಾಗಿರುವರು. ಮತ್ತೆ ಕೆಲವರು ಕಾಂಗ್ರೆಸ್ ಮೊದಲಾದ ರಾಜಕಾರಣದ ಸಂಸ್ಥೆಗಳಲ್ಲಿ ಸೇರಿರುವರು. ಎಂದಮೇಲೆ ಮಹಾಸಭೆಯ ಕಾರ್ಯಗಳನ್ನೇ ಮಾಡುತ್ತಿರುವವರಾರು?

ಸರಕಾರಿ ಅಧಿಕಾರಗಳಲ್ಲಿರುವವರಿಗೆ ಈ ಸಮಾಜ ಸೇವೆಯ ಕಾರ್ಯವನ್ನು ಮಾಡುವುದು ಶಕ್ಯವಿಲ್ಲ. ಕಾಂಗ್ರೆಸ್ ಕಾರ್ಯಕರ್ತರಂತೂ ಜಾತಿವಿಶಿಷ್ಟವಾದುದೆಂದು ತಿಳಿದು ಈ ಸಮಾಜ ಕಾರ್ಯವನ್ನು ಮಾಡುವಂತಿಲ್ಲ. ಮತ್ತು ಅವರಿಗೆ ಅವಕಾಶವೂ ದೊರೆಯುವ ಹಾಗಿಲ್ಲ. ಇನ್ನುಳಿದ ಸ್ಥಳೀಯ ಸಂಸ್ಥೆಗಳಲ್ಲಿ ಸೇರಿದ ಸುಶಿಕ್ಷಿತರಾದರೋ ಪಕ್ಷೋಪಪಕ್ಷಗಳ ತಿಕ್ಕಾಟದಲ್ಲಿ ಸಿಕ್ಕಿಕೊಂಡಿರುವುದರಿಂದ ಈ ಸಮಾಜ ಕಾರ್ಯಕ್ಕೆ ಅವರಿಗೆ ಅವಕಾಶ ದೊರೆಯುವುದು ಶಕ್ಯವಿಲ್ಲ. ದೊರೆತರೂ ಅವರು ಎಲ್ಲರಲ್ಲಿ ಸೇರಿ ಕೆಲಸ ಮಾಡುವಂತಹ ಸ್ಥಿತಿಯಲ್ಲಿಲ್ಲ. ಮಹಾಸಭೆಯು ಎಲ್ಲಿಯಾದರೂ ಕೂಡುವುದು ನಿರ್ಧಾರವಾದನಂತರ ಅಧ್ಯಕ್ಷಸ್ಥಾನದ ವಿಷಯದಲ್ಲಿ ಮಾತ್ರ ಮುಂದರಿಯುವ ಮತ್ತು ಮುಂದೆ ಮಾಡುವ ಪ್ರಯತ್ನಗಳು ಇವರಲ್ಲಿ ಅನೇಕರಿಂದ ನಡೆಯುತ್ತವೆ. ಏಕೆಂದರೆ ಆ ಸ್ಥಾನದ ಗೌರವವು ತಮ್ಮ ಮುಂದಿನ ಕಾರ್ಯಗಳಿಗೇನಾದರೂ ಸಹಾಯವಾಗಬಹುದೆಂದು ಅವರ ಧೋರಣ.

ಈ ಮೂರು ವರ್ಗದ ಸುಶಿಕ್ಷಿತರಲ್ಲಿ ಎಲ್ಲರೂ ಹೀಗೆಯೇ ಇದ್ದಾರೆಂಬುದೇನೂ ನಮ್ಮ ಅಭಿಪ್ರಾಯವಲ್ಲ. ಆದರೆ ಬಹು ಭಾಗದವರಂತೂ ಹೀಗಿದ್ದಾರೆಂಬುದರಲ್ಲಿ ಸಂದೇಹವೇ ಇಲ್ಲ. ಮಹಾಸಭೆಯ ಕಾರ್ಯವನ್ನೇ ಮಾಡುವಂತಹ ಸುಶಿಕ್ಷಿತರ ಒಂದು ವರ್ಗವು ಏರ್ಪಡುವ ವರೆಗೂ ಮಹಾಸಭೆಯು ಪರಿಣಾಮಕಾರಿಯಾಗುವದು ಶಕ್ಯವೇ ಇಲ್ಲ. ಯಾರೂ ಕಾರ್ಯ ಮಾಡದೆ ಮಹಾಸಭೆಯಿಂದೇನಾಯಿತು? ಮಹಾಸಭೆಯ ಪ್ರಯೋಜನವೇನು? ವೃಥಾ ಧನ ಕಾಲ ಶ್ರಮಗಳ ವ್ಯಯವಲ್ಲವೆ? ಎಂದು ಹೇಳುವುದಲ್ಲಿ ಆರ್ಥವೇನಿದೆ? ನಾಲ್ವತ್ತು ಲಕ್ಷ ಜನ ಸಂಖ್ಯೆಯುಳ್ಳ ಈ ಸಮಾಜದ ಮಹಾಸಭೆಯ ಕಾರ್ಯಕ್ಕೆ ನಾಲ್ಕಾರು ಜನರು ವರುಷದಲ್ಲಿ ನಾಲ್ಕಾರು ತಿಂಗಳಾದರೂ ಪ್ರಯತ್ನಿಸದಿದ್ದ ಮೇಲೆ ಮಹಾಸಭೆಯ ಕಾರ್ಯವು ಹೇಗೆ ತಾನೇ ಪರಿಣಾಮಕಾರಿಯಾಗುವದು?

ಮಹಾಸಭೆಯ ಕಾರ್ಯವನ್ನು ಮಾಡುವುದಕ್ಕಾಗಿಯೇ ಳಂ ಜನರ ಒಂದು ಮಧ್ಯವರ್ತಿ ಮಂಡಲವು ೧೯೩೩ ನೆಯ ಧಾರವಾಡ ಸಭೆಯಲ್ಲಿ ಏರ್ಪಟ್ಟಿತು. ಆ ಸದಸ್ಯರ ಹೆಸರುಗಳನ್ನೂ ಮೊದಲನೆಯ ಮತ್ತು ಎರಡನೆಯ ಮಧ್ಯವರ್ತಿ ಮಂಡಲದ ಸಭೆ ಸೇರಿದಾಗ ಬಂದ ಸದಸ್ಯರ ಹೆಸರುಗಳನ್ನೂ ಇದೇ ಸಂಚಿಕೆಯಲ್ಲಿ ಬೇರೆ ಕೊಟ್ಟಿದೆ. ಅದರ ನೇರಿಂದ ಮಹಾಸಭೆಯ ಕಾರ್ಯವು ಎಷ್ಟರಮಟ್ಟಿಗೆ ನಡೆಯುವುದು ಶಕ್ಯವೆಂಬುದು ಸ್ಪಷ್ಟವಾಗುತ್ತದೆ.

ಮುಂದಾಳುಗಳ ಅಭಾವ.

ಮಹಾಸಭೆಯ ಈ ವರೆಗಿನ ಸ್ಥಿತಿಯನ್ನು ನೋಡಿದನಂತರವಾದರೂ ಇದು ಅನಾವಶ್ಯಕವೆಂದೇ ತೋರುವುದಿಲ್ಲವೇ? ಎಂದು ಕೆಲವರು ಕೇಳಬಹುದು. ಮಹಾಸಭೆಯು ಅನಾವಶ್ಯಕವಾದ ಸಂಸ್ಥೆಯೇನೂ ಅಲ್ಲ. ಆದರೆ ಅದರ ಉಪಯೋಗವನ್ನು ಮಾಡಿಕೊಳ್ಳುವಂತಹ ಮುಂದಾಳುಗಳು ಮಾತ್ರ ನಮ್ಮ ಸಮಾಜದಲ್ಲಿಲ್ಲ. ಅಂತೆಯೇ ಅದರಿಂದ ಪ್ರಯೋಜನವಾಗುತ್ತಾ ಇಲ್ಲ.

ಸಮಾಜದ ಸ್ಥಿತಿಯನ್ನೂ ರಾಷ್ಟ್ರದಲ್ಲುಂಟಾದ ಜಾಗೃತಿಯನ್ನೂ ಅರಿತುಕೊಂಡು ಸಮಾಜಕ್ಕೂ ರಾಷ್ಟ್ರಕ್ಕೂ ಹಿತಕರವಾದ ಕಾರ್ಯ ಕ್ರಮಗಳನ್ನು ಗೊತ್ತುಪಡಿಸಿ ಅವುಗಳಿಗಾಗಿಯೇ ಪ್ರಯತ್ನಿಸುವ ಮುಂದಾಲೋಚನೆಯ ಮುಂದಾಳುಗಳು ಈ ಸಮಾಜದಲ್ಲಿ ಇತ್ತೀಚೆಗೆ ಇಲ್ಲವಾದರು.

ತ್ಯಾಗವೀರ ಶಿರಸಂಗಿ ಲಿಂಗರಾಜರು ಶ್ರೀಮಂತ ವಾರದ ಮಲ್ಲಪ್ಪನವರು ಶೈಕ್ಷಣಿಕ ಮತ್ತು ಸಾಂಪತ್ತಿಕ ಅಭಿವೃದ್ಧಿಗಳ ಕಡೆಗೆ ಸಮಾಜವನ್ನು ತಿರುಗಿಸಿದಂತೆ ಮುಂದಾಲೋಚನೆಯ ಮುಂದಾಳುಗಳು ಸಮಾಜದ ದುರ್ದೈವದಿಂದ ಮುಂದೆ ದೊರೆಯಲಿಲ್ಲ. ಈಗ ಮಹಾರಾಷ್ಟ್ರ ಬ್ರಾಹ್ಮಣರ ಆರ್ಥಿಕ ಪರಿಸ್ಥಿತಿಯಲ್ಲಿ ಯಾವ ಸಂಗತಿಗಳು ಚರ್ಚಿಸಲ್ಪಟ್ಟವೋ ಅವೇ ೨೮ ವರುಷಗಳ ಹಿಂದೆ ಶ್ರೀಮಂತ ವಾರದ ಅಪ್ಪಾಸಾಹೇಬರಿಂದ ಬಾಗಲಕೋಟೆ ಮಹಾಸಭೆಯಲ್ಲಿ ವಿವೇಚಿಸಲ್ಪಟ್ಟಿದ್ದವು.

ಅಂತಹ ಮುಂದಾಳುಗಳು ಇತ್ತೀಚಿಗೆ ದೊರೆತಿದ್ದರೆ ವೀರ ಶೈವ ಮಹಾಸಭೆಯಿಂದ ಇಷ್ಟರಲ್ಲಿ ವೀರಶೈವರ ಗಿರಣಿ, ಬ್ಯಾಂಕು, ಕಲಾಭವನಾದಿ ಸಾಂಪತ್ತಿಕ ಅಭಿವೃದ್ಧಿಯ ಅನೇಕ ಮಹತ್ಕಾರ್ಯಗಳು ಜರುಗಿ ಸಮಾಜಕ್ಕೂ ನಾಡಿಗೂ ಬಹು ಪ್ರಯೋಜನವನ್ನುಂಟುಮಾಡುತ್ತಿದ್ದವು. ನಮ್ಮ ಧನಿಕರು ಕಾರ್ಯ ಮಾಡುವ ಮುಂದಾಳುಗಳಿಗೆ ಹಣವನ್ನು ಹೇಗೆ ಸೂರೆ ಮಾಡುತ್ತಾರೆಂಬುದಕ್ಕೆ ದಾವಣಗೆರೆ ಮಹಾಸಭೆಯಲ್ಲಿ ಎರಡು ಮೂರು ತಾಸುಗಳಲ್ಲಿಯೇ ೩೨ ಸಾವಿರ ರೂ. ಗಳು ಕೂಡಿದುದೇ ಸಾಕ್ಷಿಯಾಗಿದೆ.

ಸಮರ್ಥರಾದ ಕೆಲವು ಮುಂದಾಳುಗಳಾದರೂ ಸಮಾಜ ಕಾರ್ಯದಲ್ಲಿ ಲಕ್ಷಿಸುವವರಿದ್ದಿದ್ದರೆ ಇಷ್ಟರಲ್ಲಿ ಸಾಂಪತ್ತಿಕ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ವೀರಶೈವ ಸಮಾಜವು ಬಹು ಮುಂದರಿದು ಅನ್ಯ ಸಮಾಜಗಳಿಗೂ ಖಂಡಿತವಾಗಿ ಮಾರ್ಗದರ್ಶಿಯಾಗುತ್ತಿದ್ದಿತು.

ಈ ಸಾರೆ ಮಾಡಬೇಕಾದುದೇನು?

ವೀರಶೈವ ಮಹಾಸಭೆಯು ಅತ್ಯಾವಶ್ಯಕವಾದ ಸಂಸ್ಥೆಯಾಗಿದೆ. ಇದು ಪ್ರತಿ ವರುಷ ಬೇರೆ ಬೇರೆ ಭಾಗಗಳಲ್ಲಿ ಸೇರಲೂಬೇಕು. ಆದರೆ ಅದರಿಂದ ಪ್ರಯೋಜನವನ್ನು ಮಾಡಿಕೊಳ್ಳುವಂತಹ ಕಾರ್ಯದಕ್ಷರು ಮಾತ್ರ ಮಧ್ಯವರ್ತಿ ಮಂಡಲದಲ್ಲಿರಬೇಕು.

ಯಾರಿಗೆ ಮಹಾಸಭೆಯ ಕಾರ್ಯ ಮಾಡಲು ಅವಕಾಶವಿಲ್ಲವೋ ಅಥವಾ ಇಷ್ಟವಿಲ್ಲವೋ ಅಂತಹವರನ್ನು ಮಧ್ಯವರ್ತಿ ಮಂಡಲಕ್ಕೆ ಆರಿಸಿಕೊಟ್ಟರೆ ಪ್ರಯೋಜನವೇನು? ಆದಕಾರಣ ಈ ಸಾರೆ ರಾಯಚೂರ ಮಹಾಸಭೆಯಲ್ಲಿ ಮಧ್ಯವರ್ತಿ ಮಂಡಲಕ್ಕೆ ಸದಸ್ಯರನ್ನು ಆರಿಸಿ ಕೊಡುವಾಗ ಯಾರಿಗೆ ಮಹಾಸಭೆಯ ಕಾರ್ಯ ಮಾಡಲು ಇಷ್ಟವಿದೆಯೋ ಅವರನ್ನೇ ಆಯಾಯ ಭಾಗಗಳ ಪ್ರತಿನಿಧಿಗಳು ಆರಿಸಿ ಕೊಡಬೇಕು.

ಮೊದಲನೆಯ ಸಾರೆ ಧಾರವಾಡದಲ್ಲಿ ಮಧ್ಯವರ್ತಿ ಮಂಡಲವು ಸೇರಿದಾಗ ಮಧ್ಯವರ್ತಿ-ಮಂಡಲದ ಕಾರ್ಯ ನಡೆಯಿಸಲು ೧೧ ಜನರ ಒಂದು ಕಾರ್ಯಕಾರಿ ಮಂಡಲವನ್ನು ಏರ್ಪಡಿಸಬೇಕೆಂದು ತೀರ್ಮಾನವಾಗಿದೆಯಷ್ಟೆ. ಆ ಪ್ರಕಾರ ಒಂದು ಕಾರ್ಯಕಾರಿ ಮಂಡಲು ಈ ಸಾರೆ ಗೊತ್ತುಮಾಡಲ್ಪಡಬೇಕು.

ಮುನಸಿಪಾಲ್ಟಿ, ಲೋಕಲ್‌ಬೋರ್ಡ, ಕೌನ್ಸಿಲ್ಲುಗಳಿಗೆ ಹೇಗೆ ಹುರಿಯಾಳುಗಳಾಗಿ ನಿಂತು ಹೋರಾಡುವರೋ ಹಾಗೆ ಮಧ್ಯವರ್ತಿ ಮಂಡಲ ಮತ್ತು ಕಾರ್ಯಕಾರಿ ಮಂಡಲಗಳಲ್ಲಿ ಸೇರಿ ಸಮಾಜ ಸೇವೆಗೆ ಹೋರಾಡುವಂತಹ ವರ್ಗವು ಎಂದು ಈ ಸಮಾಜದಲ್ಲಿ ನಿರ್ಮಾಣವಾಗುವದೋ ಅಂದೇ ಮಹಾಸಭೆಯು ಪರಿಣಾಮಕಾರಿಯಾಗಿ ಪರಿಣಮಿಸುತ್ತದೆ. ಅಂತಹ ಸುಸಮಯವು ಸವಿೂಪಿಸುತ್ತಿದೆಯೆಂದೇ ನಾವು ದೃಢವಾಗಿ ನಂಬಿದ್ದೇವೆ.

ಮಹಾರಾಷ್ಟ್ರೀಯ ಬ್ರಾಹ್ಮಣರ ಸ್ತುತ್ಯ ಪ್ರಯತ್ನ.

——:(♦):——

ಮಹಾರಾಷ್ಟ್ರ ಬ್ರಾಹ್ಮಣರ ಆರ್ಥಿಕ ಪರಿಷತ್ತು ಕಳೆದ ವಾರ ಪುಣೆ ಪಟ್ಟಣದಲ್ಲಿ ಸೇರಿ ಹತ್ತು ಲಕ್ಷ ರೂ. ಗಳ ನಿಧಿಯನ್ನು ಕೂಡಿಸಬೇಕೆಂದು ಗೊತ್ತುಮಾಡಿ ಕಾರ್ಯಕ್ರಮಗಳನ್ನೂ ನಿರ್ಧರಿಸಿದುದು ಅತ್ಯಂತ ಸ್ತುತ್ಯವಾದುದಾಗಿದೆ. ಈ ಮಹತ್ಕಾರ್ಯಕ್ಕೆ ಸಾಂಗಲಿಯ ಶ್ರೀಮಂತ ವೇಲಣಕರ್ ಇವರು ಎರಡು ಲಕ್ಷ ರೂ. ಗಳನ್ನು ಕೊಟ್ಟುದಕ್ಕಾಗಿ ನಾವು ಇವರನ್ನು ಹೃದಯಪೂರ್ವಕ ಅಭಿನಂದಿಸುತ್ತೇವೆ.

ಈ ಪರಿಷತ್ತಿನಲ್ಲಾದ ಕೆಲವರ ವ್ಯಾಖ್ಯಾನಗಳ ಮುಖ್ಯಾಂಶಗಳನ್ನೂ ರಾಜಕಾರಣಕ್ಕಾಗಿಯೇ ಜೀವಿಸಿರುವ ಕೇಸರೀ ಪತ್ರಿಕೆಯ ಅಭಿಪ್ರಾಯವನ್ನೂ ಬೇರೆ ಕಡೆ ಕೊಟ್ಟಿದ್ದೇವೆ. ಬ್ರಾಹ್ಮಣರು ತಮ್ಮ ಆರ್ಥಿಕ ಉನ್ನತಿಗಾಗಿ ಪ್ರಯತ್ನಿಸುವುದು ಅಭಿನಂದನೀಯವಾದುದೇ ಸರಿ. ಆದರೆ ಇದು ಜಾತಿವಿಶಿಷ್ಟವಾದ ಪ್ರಯತ್ನವೇನೂ ಅಲ್ಲವೆಂದು ಇನರು ಪ್ರತಿಪಾದಿಸಿರುವುದು ಮಾತ್ರ ಸಮಂಜಸವಾಗಿಲ್ಲ. ರಾಜಕಾರಣದಲ್ಲಿ ಮುಂದಾಳುಗಳಾಗಿದ್ದ ಶ್ರೀ. ಭೋಪಟಕರರಂಥ ಹೊಣೆಗಾರಿಕೆಯ ಜನರು ಮಹಾರಾಷ್ಟ್ರ ಬ್ರಾಹ್ಮಣರ ದೇಶಭಕ್ತಿಯು ನೈಸರ್ಗಿಕವೆಂದು ಆ ರೀತಿಯಾಗಿ ಕೊಂಡಾಡಿರುವುದು ಅನುಚಿತವು.

ಖಿಲಾಫತ್ ಚಟುವಟಿಕೆ ನಿಂತನಂತರ ಅನೇಕ ಮುಸಲ್ಮಾನರ ರಾಷ್ಟ್ರ ಭಕ್ತಿಯು ಹೇಗೆ ಹೊರಬಿದ್ದಿತೋ ಹಾಗೆಯೇ ಈ ಆರ್ಥಿಕ ಮುಕ್ಕಟ್ಟಿನಿಂದ ಅನೇಕ ಮಹಾರಾಷ್ಟ್ರ ಬ್ರಾಹ್ಮಣರ ದೇಶ ಭಕ್ತಿಯೂ ಹೊಸ ರೂಪದಿಂದ ಹೊರಬೀಳುವಂತೆ ಕಾಣುತ್ತದೆ. ಕೇಸರೀಕಾರರಂತಹ ರಾಷ್ಟ್ರ ಭಕ್ತರು - ಜಾತಿ ನಿರ್ಣಯವನ್ನು ಪ್ರಖರವಾಗಿ ವಿರೋಧಿಸುವವರು - ನಿರುದ್ಯೋಗಗಳಲ್ಲಿಯೂ ಜಾತಿಗಳನ್ನು ಕಲ್ಪಿಸಿದುದು ಆಶ್ಚರ್ಯಕರವಲ್ಲವೇ?

ಶೈಕ್ಷಣಿಕ, ಸಾಂಪತ್ತಿಕ ಮತ್ತು ಸಾಂಸ್ಕೃತಿಕ ಭಿನ್ನ ಭಿನ್ನ ಅಂತಸ್ತುಗಳಲ್ಲಿರುವ ಹಿಂದು ಜನಾಂಗದ ನಾನಾ ಸಮಾಜಗಳಲ್ಲಿ ಈ ಜಾತಿಭಾವವಿರುವುದು ಸ್ವಾಭಾವಿಕ. ತಿಳಿಯದವರು ಜಾತಿವಿಶಿಷ್ಟ ಹೆಸರಿನಿಂದ ಸ್ವಜಾತಿಯ ಹಿತದ ಕಾರ್ಯಗಳನ್ನು ಮಾಡುತ್ತಿದ್ದರೆ ತಿಳಿದವರಾದರೋ ರಾಷ್ಟ್ರೀಯ ಹೆಸರಿನಿಂದ ಸ್ವಜಾತಿವಿಶಿಷ್ಟ ಕಾರ್ಯಗಳನ್ನು ಮಾಡುತ್ತಿರಬಹುದು.

ಬೇರೆ ಬೇರೆ ಸಮಾಜಗಳಲ್ಲಿರುವ ಸಾಮಾಜಿಕ ಸಾಂಪತ್ತಿಕಾದಿ ವಿಷಮತೆಗಳು ನಿವಾರಣೆಯಾದ ವಿನಾ ರಾಷ್ಟ್ರೀಯ ಭಾವನೆಯು ಹೇಗೆ ತಾನೆ ಉಂಟಾಗುವುದು? ಸಕಲರಿಗೂ ಸಂಬಂಧಪಡಲು ಶಕ್ಯವಿರುವಂತಹ ಆರ್ಥಿಕ ಪ್ರಯತ್ನವೂ ಒಂದೇ ಪ್ರಾಂತ ಮತ್ತು ಜಾತಿಯವರಿಂದಲೇ ನಡೆದರೂ ಅದು ಜಾತಿವಿಶಿಷ್ಟವಲ್ಲವೆಂದ ಮೇಲೆ ಒಂದು ಜಾತಿಯವರು ಎಲ್ಲರ ಶಿಕ್ಷಣ ಪ್ರಸಾರಕ್ಕಾಗಿ ಪ್ರಯತ್ನಿಸಿದರೆ ಇಲ್ಲವೆ ತಮ್ಮ ಸಾಮಾಜಿಕ ಮತ್ತು ಧಾರ್ಮಿಕ ಉನ್ನತಿಗಳಿಗಾಗಿ ಸಾಹಸಪಟ್ಟರೆ ಅದೇಕೆ ಜಾತಿವಿಶಿಷ್ಟವಾದುದಾಗಿಯೂ ರಾಷ್ಟ್ರವಿಘಾತಕವಾದುದಾಗಿಯೂ ಪರಿಣಮಿಸುತ್ತದೋ ನಮಗೆ ತಿಳಿಯದು. ಅವರ ವಿಚಾರ ಸರಣಿಯು ಸರಿಯಾಗಿಲ್ಲದಿದ್ದರೂ ಪ್ರಾರಂಭಿಸಿದ ಕಾರ್ಯವು ಸ್ತುತ್ಯವಾದುದಾಗಿರುವುದರಿಂದ ಅದು ಜಯಪ್ರದವಾಗಿ ಜರುಗಿ ಅನ್ಯ ಜಾತಿಯವರು ಇನ್ನು ವೇಲಾದರೂ ಎಚ್ಚರಿಯುವಂತಾಗಲಿ.

ಕುರಿ ಕೋಣಗಳ ಮೊರೆ!

ವಿಜಾಪುರ ಜಿಲ್ಲಾ ಬಾಗೇವಾಡಿ ತಾಲೂಕಿನಲ್ಲಿ ಬೇನಾಳ ಎಂಬ ದೊಂದು ಹಳ್ಳಿ. ಇಲ್ಲಿ ಸಾಧಾರಣ ೧೫೦೦ ಜನಸಂಖ್ಯೆ ಇದೆ. ಆಲಮಟ್ಟಿ ಸ್ಟೇಶನ್ನಿನಿಂದ ೨ ಮೈಲು ದೂರದಲ್ಲಿದೆ. ಇದೇ ೨೭ನೆಯ ತಾರೀಖಿನ ದಿನ ಇಲ್ಲಿ ದುರ್ಗಾದೇವಿಯ ಜಾತ್ರೆ. ಆ ದಿನ ನಿರಪರಾಧಿ ಬಡ ಪ್ರಾಣಿಗಳ ಘೋರ ಕೊಲೆ. ಮೂಕ ಪ್ರಾಣಿಗಳಾದ ಆ ಕುರಿ ಕೋಣಗಳ ಮೊರೆಯನ್ನು ಕೇಳುವವರಾರು? ದಯಾಶಾಲಿಗಳೇ? ಇಲ್ಲಿಗೆ ಬಂದು ಈ ಪಾಪ ಕಾರ್ಯವನ್ನು ನಿಲ್ಲಿಸಿ ಪುಣ್ಯ ಪಡೆಯಿರಿ.

ಓರ್ವ ಅಹಿಂಸಾಪ್ರಿಯ.

ಶ್ರೀ ಸುಬ್ಬ ನರಸಿಂಹ ಶಾಸ್ತ್ರಿಗಳ ತಪ್ಪು ತಿಳುವಳಿಕೆ

ಶ್ರೀ ರೇಣುಕ ಜಯಂತಿಯ ಕಾಲಕ್ಕೆ ಬಸವ ಮಹಾನು ಭಾವನನ್ನು ನಿಂದಿಸಿ ಪ್ರಸಿದ್ಧಿಗೆ ಬಂದ ಬೆಂಗಳೂರಿನ ಶ್ರೀ. ಬಿ. ಸುಬ್ಬ ನರಸಿಂಹ ಶಾಸ್ತ್ರಿಗಳು 'ನವಶಕ್ತಿ' ಪತ್ರಿಕೆಯ ತಾ. ೧೭-೪-೩೬ ನೆಯ ಸಂಚಿಕೆಯಲ್ಲಿ "ಮಹಾತ್ಮಾ ಬುದ್ಧನು ಅನಾರ್ಯನೇ?" ಎಂಬ ಲೇಖನವನ್ನು ಬರೆದು ಬಸವ ಮಹಾತ್ಮನನ್ನು ದೂಷಿಸಿ ನವ್ಯ ಲೇಖನದ ವಿಷಯದಲ್ಲಿ ದುರಭಿಪ್ರಾಯವುಂಟಾಗುವಂತೆ ಪ್ರಯತ್ನಿಸಿದ್ದಾರೆ.

ಯಾವ ವಿಷಯವು ವಿವಾದಾಸ್ಪದವಾಗಿದೆಯೋ ಅದನ್ನು ಕುರಿತು ಪ್ರಸ್ತಾಪಿಸುವಾಗ ಲೇಖಕರ ವಿಷಯದಲ್ಲಿ ಅಸಭ್ಯ ಶಬ್ದಗಳನ್ನು ಪಯೋಗಿಸುವುದು ವಿದ್ಯಾಭ್ಯಾಸ ಮಾಡಿದ ಇಂತಹ ಶಾಸ್ತ್ರಿಗಳಿಗೆ ಭೂಷಣವಾದುದಲ್ಲ. ಇನ್ನು ಮೇಲಾದರೂ ತಮ್ಮ ಮಾನ ಮನ್ನಣೆಗಳಿಗೆ ಚ್ಯುತಿಯಾಗುವಂತಹ ಶಬ್ದಗಳನ್ನು ಪಯೋಗಿಸದೆ ವಿವೇಕಿಗಳು ಪ್ರಸ್ತಾಪಿಸುವಂತಹ ಗೌರವದ ನೀತಿ ರೀತಿಗಳನ್ನೇ ಅನುಸರಿಸಬೇಕಾಗಿ ಶಾಸ್ತ್ರಿಗಳಿಗೆ ಮೊದಲು ಸಪ್ರೇಮ ಸೂಚನೆ—

ನಾವು ಬರೆದುದೇನು ?

ತಾ. ೨೩-೩-೧೯೩೬ ನೆಯ ಸಂಚಿಕೆಯಲ್ಲಿ "ವಿಘಾತಕ ರೀತಿ" ಎಂಬ ಶಿರೋಲೇಖನದಲ್ಲಿ ನಾವು ಹೀಗೆ ಬರೆದಿದ್ದೇವೆ.—

"ಆರ್ಯರು ಈ ದೇಶಕ್ಕೆ ಬಂದು ಮಾಡಿದ ಅನರ್ಥಗಳನ್ನು ನಿವಾರಣೆ ಮಾಡುವುದಕ್ಕಾಗಿಯೇ ಬುದ್ಧ ಬಸವಾದಿಗಳು ಪ್ರಯತ್ನಿಸಿದರು. ವರ್ಣದ ವಿಷ ಬೀಜವನ್ನು ಬಿತ್ತಿದ ಆರ್ಯರ ವೇದ ಸ್ಮೃತಿಗಳ ಕಾಲವನ್ನು ಮತ್ತೆ ತರಲು ಈ ಹೆಸರಿನ ಆರ್ಯರು ಪ್ರಯತ್ನಿಸುತ್ತಿದ್ದಾರೆ."

ಇದರಿಂದ ಆರ್ಯರೆಂಬ ಒಂದು ಜನಾಂಗದವರು ಈ ದೇಶಕ್ಕೆ ಬಂದು ಬ್ರಾಹ್ಮಣಾದಿವರ್ಣಗಳನ್ನುಂಟುಮಾಡಿದರೆಂತಲೂ ಅವರ ಈ ವಿಷ ಬೀಜವೇ ಜನಾಂಗಕ್ಕೆ ಅನರ್ಥಕರವಾಯಿತೆಂತಲೂ ಬುದ್ಧ ಮತ್ತು ಬಸವ ಇವರು ಬ್ರಾಹ್ಮಣಾದಿ ವರ್ಣಗಳನ್ನು ತೆಗೆದುಹಾಕಿ ಆರ್ಯಜನರಿಂದುಂಟಾಗಿದ್ದ ಅನರ್ಥಗಳನ್ನು ನಿವಾರಣೆ ಮಾಡಲು ಪ್ರಯತ್ನಿಸಿದರೆಂತಲೂ ನಾವು ಹೇಳಿದ್ದೇವೆಂಬುದು ಸ್ಪಷ್ಟವಾಗುತ್ತದಷ್ಟೇ. ಈ ಸರಳವಾದ ಅರ್ಥವನ್ನು ಶಾಸ್ತ್ರಿಗಳು ತಪ್ಪಾಗಿ ತಿಳಿದು ಈ ಪ್ರಕಾರ ಬರೆದಿದ್ದಾರೆ.

ಶಾಸ್ತ್ರಿಗಳು ಬರೆದುದೇನು?

ನಾವು ಬರೆದ ಮೇಲಣ ಸಂಗತಿಗಳಲ್ಲಿ ಈ ಕೆಳಗೆ ಕೊಟ್ಟಿರುವ ಅಂಶವನ್ನಷ್ಟೇ ಹೀಗೆ ಕೊಟ್ಟಿದ್ದಾರೆ- "ಆರ್ಯರು ಈ ದೇಶಕ್ಕೆ ಬಂದು ಮಾಡಿದ ಅನರ್ಥಗಳನ್ನು ನಿವಾರಣೆ ಮಾಡುವದಕ್ಕಾಗಿಯೇ ಬುದ್ಧ ಬಸವಾದಿಗಳು ಪ್ರಯತ್ನಿಸಿದರು."

"ಬುದ್ಧನು ತನ್ನ ನಾಲ್ಕು ತತ್ವಗಳನ್ನೂ ಆರ್ಯಸತ್ಯಗಳೆಂದು ಕರೆದಿದ್ದಾನೆ. ಬುದ್ಧನು ಆರ್ಯಧರ್ಮದ ಶತ್ರುವಾಗಿದ್ದಿದ್ದರೆ ತನ್ನ ನಾಲ್ಕು ತತ್ವಗಳನ್ನು ಆರ್ಯಸತ್ಯಗಳೆಂದು ಕರೆಯುತ್ತಿರಲಿಲ್ಲ. ಬುದ್ಧನು ಸ್ತ್ರೀಯರನ್ನು ಆರ್ಯಾ ಎಂದು ಪುರುಷರನ್ನು ಆರ್ಯ ಎಂದು ಅನೇಕ ಕಡೆಯಲ್ಲಿ ಸಂಬೋಧಿಸಿದ್ದಾನೆ.

"ಹೀಗಿದ್ದರೂ ಶ್ರೀಯುತ ಮಂಜಪ್ಪನವರು ಬುದ್ಧನನ್ನು ಬಸವನ ಜೊತೆಗೆ ಸೇರಿಸಿ ಅವನಿಗೆ ಅನಾರ್ಯ ಪಟ್ಟವನ್ನು ಕಟ್ಟಿರುವುದು ತುಂಬಾ ಆಶ್ಚರ್ಯಕರವಾಗಿರುತ್ತದೆ. ನಿಜವಾಗಿ ನೋಡಿದರೆ ಬಸವನೂ ಸಹ ಆರ್ಯ ಧರ್ಮಿಯರಲ್ಲಿಯೇ ಹುಟ್ಟಿ ಅನಾರ್ಯ ಧರ್ಮವನ್ನು ಪ್ರಚಾರ ಮಾಡಿದ್ದಾನೆ."

"ಇತ್ತೀಚೆಗೆ ಕೆಲವು ಮಂದಿ ಬುದ್ಧನ ಜೊತೆಗೆ ಬಸವನ ಹೆಸರನ್ನೂ ಸೇರಿಸಿ ಆ ಮಹಾತ್ಮನ ನೆರಳನಲ್ಲಿ ಬಸವನನ್ನು ಮೆರಸತೊಡಗಿದ್ದಾರೆ. ಮೃಗರಾಜ ಸಿಂಹನ ಜೊತೆಯಲ್ಲಿ ಗುಳ್ಳೆ ನರಿಯನ್ನು ಸೇರಿಸಿದಂತೆ ಬುದ್ಧನ ಜೊತೆಯಲ್ಲಿ ಬಸವನನ್ನು ಸೇರಿಸಿದ ಮಾತ್ರದಿಂದ ಯಾವ ಕಾರ್ಯ ಸಾಧನೆಯೂ ನಡೆಯುವುದಿಲ್ಲ. ಅಮರ ಜೀವಿಯಾದ ಭಗವಾನ್ ಬುದ್ಧನ ಕೊರಳಿನಲ್ಲಿ ಬಸವನ ನಿರ್ಜೀವ ಪ್ರೇತವನ್ನು ಜೋಲು ಹಾಕಿದರೂ ಅದು ನಿಲ್ಲುವಂತಿಲ್ಲ."

ಆರ್ಯ ಜನಾಂಗ ಮತ್ತು ಆರ್ಯ ಶಬ್ದ.

ನಾವು ಈ ದೇಶಕ್ಕೆ ಬಂದ ಆರ್ಯ ಜನಾಂಗದ ಸಂಬಂಧವಾಗಿ ಪ್ರಸ್ತಾಪಿಸಿದ್ದೇವಷ್ಟೆ. ಶಾಸ್ತ್ರಿಗಳಾದರೋ ಆರ್ಯ ಶಬ್ದದ ಸಂಬಂಧವಾಗಿ ವಿವೇಚಿಸಿದ್ದಾರೆ. ಆರ್ಯ ಎಂಬ ಶಬ್ದವು ಘನತೆ, ಗೌರವ, ಮಾನ ಮನ್ನಣೆಗಳ ದ್ಯೋತಕವಾದುದು. ಆರ್ಯ ಪುತ್ರನೆ, ಎಂದರೆ ಗೌರವ ಹೊಂದಿದವರ ಮಗನೆಂದು ತಿಳಿಯಬೇಕೋ, ಅಥವಾ ನಾಲ್ಕಾರು ಸಾವಿರ ವರುಷಗಳ ಹಿಂದೆ ಈ ದೇಶಕ್ಕೆ ಬಂದಿದ್ದ ಆರ್ಯ ಜನರ ಮಗನೆಂದು ತಿಳಿಯಬೇಕೊ? ಬುದ್ಧನು ಆರ್ಯ ಸತ್ಯಗಳೆಂದು ಪ್ರಯೋಗಿಸಿದ ಮಾತ್ರದಿಂದ ಅವು ಆರ್ಯ್ಯ ಜನರು ವೇದಗಳಲ್ಲಿ ಹೇಳಿದ ಸತ್ಯಗಳೆಂದಲ್ಲ. ಅವು ಗೌರವಾರ್ಹವಾದ ಸತ್ಯ ಸಿದ್ಧಾಂತಗಳೆಂದೇ ತಿಳಿಯಬೇಕಾದುದು ವಿಹಿತ.

ಬುದ್ಧನು ಬ್ರಾಹ್ಮಣಾದಿವರ್ಣಗಳನ್ನು ತೆಗೆದು ಹಾಕಿಲ್ಲವೇ? ವರ್ಣ ಧರ್ಮವು ವೇದ ಮತ್ತು ಸ್ಮೃತಿಗಳನ್ನು ಮಾನ್ಯ ಮಾಡುವ ವೈದಿಕರಿಗೆ ಜೀವಾಳವಲ್ಲವೆ? ಈ ವರೆಗೆ ಅನೇಕ ವೈದಿಕರು ಬುದ್ಧನನ್ನು ನಾಸ್ತಿಕ, ವೇದನಿಂದಕ, ಎಂಬುದಾಗಿ ಮನಬಂದಂತೆ ನಿಂದಿಸಿಲ್ಲವೆ?

ಶಾಸ್ತ್ರಿಗಳೇ ಭಾಷಾಂತರಿಸಿರುವ ಶ್ರೀ ದಯಾನಂದರ ಸತ್ಯಾರ್ಥ ಪ್ರಕಾಶ ಗ್ರಂಥದ ಬೌದ್ಧಮತ ಸಮೀಕ್ಷಾ ಪ್ರಕರಣವನ್ನು ಓದಿ ನೋಡಿರಿ. ಅದರಲ್ಲಿ ಬೌದ್ಧರನ್ನು ಕುರಿತು ೪೫೮ ನೆಯ ಪುಟದಲ್ಲಿ ಹೀಗೆ ಹೇಳಿದೆ.—

"ಇಂದ್ರಿಯಾಂತಃಕರಣಗಳ ಪೂಜೆಯೂ ಕೂಡಾ ಮೋಕ್ಷ ಪ್ರದವಾಗಿರುವುದಾದರೆ ಬೌದ್ಧರಿಗೂ ಕಾಮುಕ ಪುರುಷರಿಗೂ ಭೇದವೇನು? ವೇದಗಳನ್ನೂ ಪರಮಾತ್ಮನನ್ನೂ ವಿರೋಧಿಸಿದುದಕ್ಕೆ ಇದೇ ಇವರಿಗೆ ಲಭಿಸಿದ ಫಲ."

ಆರ್ಯರೆಂದು ಹೆಸರಿಟ್ಟುಕೊಂಡವರು ಭಗವಾನ್ ಬುದ್ಧನನ್ನು ಎಷ್ಟು ಗೌರವಿಸುತ್ತಿದ್ದಾರೆಂಬುದನ್ನು ನೋಡಿರಿ. ಬಸವನನ್ನು ನಿಂದಿಸಲು ಬುದ್ಧನನ್ನು ಸ್ತುತಿಸಹೋದ ಇವರ ಈ ರೀತಿಯು ಹಾಸ್ಯಾಸ್ಪದವಲ್ಲವೆ?

ಬುದ್ಧನ ಜತೆಗೆ ಬಸವನನ್ನು ನಾವೇ ಈಗ ಸೇರಿಸಿದ್ದೇವೆಂದಲ್ಲ. ಡಾ. ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ೧೮ ವರುಷಗಳ ಹಿಂದೆಯೇ ದಾವಣಗೆರೆ ವೀರಶೈವ ಮಹಾಸಭೆಯ ಅಧ್ಯಕ್ಷರಾದಾಗ ತಮ್ಮ ಭಾಷಣದಲ್ಲಿ ಏಶಿಯಾಖಂಡದ ನಕ್ಷತ್ರದಂತಿದ್ದ ಬುದ್ಧನಿಗಿಂತಲೂ ಬಸವನ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳೇನೂ ಕಡಿಮೆಯಲ್ಲವೆಂದು ಹೇಳಿದ್ದಾರೆ. ಹಾಗೇಕೆ ಹೇಳಿದ್ದಾರೆಂಬುದನ್ನು ಶಾಸ್ತ್ರಿಗಳು ಅವರನ್ನಾದರೂ ಕೇಳಿ ತಿಳಿದುಕೊಳ್ಳುವರೆ?

ಅ. ಭಾ. ವೀರಶೈವ ಮಹಾಸಭೆಯು ಮಾಡಬೇಕಾದ ಗೊತ್ತುವಳಿಗಳು.

'ವೀರಶೈವ ಸಂಜೀವನೀ, ಪತ್ರಿಕೆಯ ಸಂಪಾದಕರಾದ ಶ್ರೀ ನಾನಾಸಾಹೇಬರು ತಮ್ಮ ೧೦ ನೆಯ ಸಂಚಿಕೆಯಲ್ಲಿ ರಾಯಚೂರಿನಲ್ಲಿ ನೆರೆಯುವ ವೀರಶೈವ ಮಹಾಸಭೆಯು ಈ ಗೊತ್ತುವಳಿಗಳನ್ನು ತೀರ್ಮಾನ ಮಾಡಬೇಕೆಂದು ಸೂಚಿಸಿದ್ದಾರೆ.

(೧) ಭಿನ್ನ ಭಿನ್ನ ಪ್ರದೇಶಗಳಲ್ಲಿ ವೀರಶೈವರಿಂದ ಸ್ಥಾಪಿಸಲ್ಪಟ್ಟ ಎಲ್ಲ ಸಣ್ಣ ದೊಡ್ಡ ಸಂಸ್ಥೆಗಳೂ ಮಹಾಸಭೆಯ ಘಟಕಗಳೆಂದು ತಿಳಿದು ಆಯಾ ಸಂಸ್ಥೆಗಳಿಂದಲೇ ವೀರಶೈವ ಮಹಾಸಭೆಗೆ ಪ್ರತಿನಿಧಿಗಳನ್ನಾರಿಸಿ ಕಳಿಸಬೇಕೆಂದು ಗೊತ್ತುವಳಿಯಾಗಬೇಕು. ಪ್ರತಿನಿಧಿಗಳ ಸಂಖ್ಯೆಯನ್ನು ಮರ್ಯಾದಿತವಾಗಿ ಮಾಡಬಾರದು.

(೨) ಲಿಂಗಧಾರಣ ದೀಕ್ಷೆಯಿಂದ ಎಲ್ಲರೂ ದ್ವಿಜರಾಗುತ್ತಾರೆಂದು ನಮ್ಮ ಧರ್ಮಶಾಸ್ತ್ರಗಳು ಹೇಳುತ್ತವೆ ಈ ಕಲ್ಪನೆಯು ನಮ್ಮಲ್ಲಿಲ್ಲದಿದ್ದುದರಿಂದ ನಾವೆಲ್ಲರೂ ಶೂದ್ರರೆಂದು ಎಣಿಸಲ್ಪಡುತ್ತಿದ್ದೇವೆ. ಮಹಾಸಭೆಯು ಈ ದ್ವಿಜತ್ವದ ಕಲ್ಪನೆಯನ್ನುಂಟು ಮಾಡಿಕೊಡಬೇಕು.

(೩) ಇನ್ನು ಬಾಲಬ್ರಹ್ಮಚಾರಿಗಳನ್ನು ಯಾವದೊಂದು ಮಠಕ್ಕೆ ಅಧಿಕಾರಿಯನ್ನಾಗಿ ಮಾಡುವದಕ್ಕಿಂತ ವಿವಾಹಿತ ಗೃಹಸ್ಥಾಶ್ರಮಿಯು ಸ್ವಸಂತೋಷದಿಂದ ಚತುರಾಶ್ರಮವನ್ನು ಸ್ವೀಕರಿಸಿದ್ದಾದರೆ ಅಂಥ ವಿದ್ವಾನ್ ವಿನಯಶೀಲ ಪುರುಷರನ್ನು ವಿರಕ್ತ ಮತ್ತು ಪಂಚಾಚಾರ್ಯಪದಕ್ಕೆ ನಿಯಮಿಸಬೇಕು. ಮಠಗಳ ಸುಧಾರಣೆಯ ಬಗ್ಗೆ ಮಹಾಸಭೆಯು ವಿಚಾರ ಮಾಡಬೇಕು.

(೪) ವಿರಕ್ತ ಪಂಚಾಚಾರ್ಯ ಪೀಠಿಕೆಗಳಲ್ಲಿ ಕೆಲವಕ್ಕೆ ಅಡ್ಡ ಪಲ್ಲಕ್ಕಿಯ ಹಕ್ಕು ಇರುತ್ತದೆ. ಈ ಅಧಿಕಾರವು ಆಯಾ ಮೂಲ ಗುರುಗಳ ಕರ್ತೃತ್ವದಿಂದುಂಟಾದುದಾಗಿರುತ್ತದೆ. ಅದರ ನೆನಪಿಗಾಗಿ ಈಗಿನ ಗುರುಗಳು ಅಡ್ಡಪಲ್ಲಕ್ಕಿಯಲ್ಲಿ ಕುಳಿತುಕೊಳ್ಳದೆ ತಮ್ಮ ಕರ್ತೃತ್ವಶೀಲ ಮೂಲ ಗುರುಗಳ ಪಾದುಕೆಗಳನ್ನು ಅಥವಾ ಪ್ರತಿಮೆಯನ್ನು ಪಲ್ಲಕ್ಕಿಯಲ್ಲಿಟ್ಟು ಉತ್ಸವಕಾಲದಲ್ಲಿ ತಾವು ಸ್ನಾನಪೂರ್ವಕ ಪಲ್ಲಕ್ಕಿಯ ಹಿಂದೆ ಸಾಗಬೇಕು. ಮಹಾಸಭೆಯು ಸ್ವಾಮಿಗಳಿಗೆ ಈ ರೀತಿ ನಿರ್ಬಂಧಪಡಿಸಬೇಕು.

---

೧೨ ನೆಯ ಶ್ರೀಮದ್ವೀರಶೈವ ಮಹಾಸಭೆಯು ರಾಯಚೂರ.

ಈ ಮಹಾಸಭೆಯ ಕಾಲಕ್ಕೆ ಜರುಗುವ ಮಹಿಳಾ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಲು ಶ್ರೀ ಸೌಭಾಗ್ಯವತಿಯರಾದ ಪಾರ್ವತಿ ದೇವಿಯರು ಕೇಸರಿ ಧಾರವಾಡ ಇವರು ಒಪ್ಪಿಕೊಂಡಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ. ಕಾರಣ ಎಲ್ಲ ಮಹಿಳೆಯರು ಬಂದು ಸಭೆಯನ್ನು ಯಶಸ್ವಿಯನ್ನಾಗಿ ಮಾಡುವಿರೆಂದು ಕೋರುವ.

ತಮ್ಮ
ಕಾರ್ಯದರ್ಶಿಗಳು.
ಹರ್ಷಿ ಸೂಗೆಮ್ಮ
ಜೆ. ಪಾರ್ವತೆಮ್ಮ

ವೀರಶೈವರ ಬ್ರಾಹ್ಮಣೀ ವಿಚಾರ!

ವರ್ಹಾಡ - ಮಧ್ಯಪ್ರಾಂತ ಮತ್ತು ಖಾನದೇಶಗಳಲ್ಲಿಯ ವೀರಶೈವ ಪ್ರಮುಖರ ಸಭೆಯು ತಾ. ೧೯-೪-೩೬ ನೆಯ ದಿವಸ ಬುಲಡಾಣಾ ಜಿಲ್ಲಾ ರೋಹಿಣಖೇಡ ಎಂಬಲ್ಲಿ ಶ್ರೀಮಂತ ದ. ಕೃ. ಉರ್ಫೆ ಬಾಬಾಸಾಹೇಬ ದೇಶಮುಖ ಜಹಗೀರದಾರ ಪಾರವಾ ಇವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ದೇ. ಭ. ನಾನಾಸಾಹೇಬ ಬಾಮಣಗಾವಕರ್ ಮೊದಲಾದ ಆ ಭಾಗದ ಪ್ರಮುಖರು ಸಭೆಗೆ ಬಂದಿದ್ದರು. ಸಭೆಯಲ್ಲಿ ಹತ್ತು ಗೊತ್ತುವಳಿಗಳಾದವು. ಅವುಗಳಲ್ಲಿ ಎರಡು ಈ ಪ್ರಕಾರ ಇವೆ.

ಗೊತ್ತುವಳಿಗಳು.

ಲಿಂಗವನ್ನು ಧರಿಸುವಾಗ ಸಕಲ ವೀರಶೈವರಿಗೂ ಶಿವದೀಕ್ಷೆಯಾಗುವುದರಿಂದ ವೀರಶೈವ ಧರ್ಮ ಶಾಸ್ತ್ರದಂತೆ ಸಕಲ ಲಿಂಗಾಂಗಿಗಳೂ ದ್ವಿಜರಾಗುತ್ತಾರೆ. ಲಿಂಗಗಳಲ್ಲದವರೆಲ್ಲಾ ಲಿಂಗಾಯತರ ದೃಷ್ಟಿಯಿಂದ ನಾಲ್ಕನೆಯ ವರ್ಣದವರಾಗುತ್ತಾರೆ. ಹಿಂದುಳಿದಪ್ರಕಾರ ಲಿಂಗಾಯತರ ಹಕ್ಕು ಬಾಬುಗಳ ವ್ಯಾಜ್ಯವನ್ನು ದ್ವಿಜೇತರರಂತೆ ನಡೆಯಿಸದೆ ದ್ವಿಜರಂತೆ ನಡೆಯಿಸಬೇಕಾಗಿ ಜಾಗೃತಿಯನ್ನುಂಟುಮಾಡಬೇಕು.

ಆಚಾರ್ಯ ಪೀಠಕ್ಕೂ, ವಿರಕ್ತ ಪೀಠಕ್ಕೂ ಬಾಲ ಬ್ರಹ್ಮಚಾರಿಗಳನ್ನು ಅಧಿಕಾರಿಗಳನ್ನಾಗಿ ಮಾಡುತ್ತಿರುವ ಪದ್ಧತಿಯನ್ನು ನಿಲ್ಲಿಸಿ ಗೃಹಸ್ಥಾಶ್ರಮಿಯು ಸ್ವೇಚ್ಛೆಯಿಂದ ಸನ್ಯಾಸಾಶ್ರಮವನ್ನು ತೆಗೆದುಕೊಂಡ ನಂತರ ಆತನನ್ನೇ ಆ ಪೀಠಗಳಿಗೆ ನಿಯಮಿಸಬೇಕು.

ವರನು ಬೇಕು.

ಲಿಂಗಾಯತ ಸುಶಿಕ್ಷಿತ ವರನು ಬೇಕಾಗಿದೆ. ಕನ್ಯೆಯು ಸುಶಿಕ್ಷಿತಳಿದ್ದು ಇಂಗ್ಲೀಷ ನಾಲ್ಕನೆಯ ಈಯತ್ತೆಯ ವರೆಗೆ ಕಲಿತಿದ್ದಾಳೆ. ರೂಪು ಸುಂದರ. ವರ್ಣ ಮನೋಹರ. ಗೃಹಕೃತ್ಯಗಳಲ್ಲಿ ದಕ್ಷಳು.

ವರನ ಸ್ಥಾವರ ಉತ್ಪನ್ನವಿದ್ದರಂತೂ ನೆಟ್ಟಗೆ. ಇಲ್ಲದಿದ್ದರೆ ಸ್ವಂತ ಬುದ್ಧಿ ಬಲದಿಂದ ಅರ್ಜನೆ ಮಾಡುವವನಾಗಿರಬೇಕು. ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

B. C/o
ಶರಣ ಸಂದೇಶ ಆಫೀಸ, ಆಲಮಟ್ಟಿ.

ಬಸವ ಭೂಮಿ.

ತ್ವರೆಮಾಡಿರಿ! ತ್ವರೆಮಾಡಿರಿ!!

ಶ್ರೀ ಮಾಗ್ಗಾಂವ ಶರಣಯ್ಯನವರಿಂದ ರಚಿಸಲ್ಪಟ್ಟ ಬಸವ ಭೂಮಿಯೆಂಬ ಈ ಚಿಕ್ಕ ಪುಸ್ತಕದಲ್ಲಿ, ಸಾಧಾರಣ ೩೦-೩೫ ಪದ್ಯಗಳು ಇರುತ್ತವೆ. ಈ ಪದ್ಯಗಳಲ್ಲಿ ಬಸವಾದಿ ಪ್ರಮಥರು ಮಾಡಿದ ಧಾರ್ಮಿಕ ಕ್ರಾಂತಿಯನ್ನು ಶುಲಭ ರೀತಿಯಿಂದ ವರ್ಣಿಸಲಾಗಿದೆ. ಪುಸ್ತಕವು ಸದ್ಯಃ ಪ್ರಿಂಟನಲ್ಲಿದ್ದು, ರಾಯಚೂರಿನಲ್ಲಿ ಕೂಡುವ ೧೨ ನೆಯ ವೀರಶೈವ ಮಹಾಸಭೆಯ ಕಾಲಕ್ಕೆ ಮಾರಲ್ಪಡುವವು. ಬೆಲೆ ರೂ. ೦-೨-೦.

ನೋಟ :— ಈ ಪುಸ್ತಕದಲ್ಲಿ, ರಸವತ್ತಾದ ಕೆಲವು ಹಿಂದೀ ಪದ್ಯಗಳೂ ಕೂಡ ಇರುತ್ತವೆ.

ವಿಳಾಸ:— ಕಲ್ಯಾಣ ಕರ್ನಾಟಕ ಬುಕ್ ಡಿಪೊ
ಗುಲಬರ್ಗಾ.

ಸ್ತುತ್ಯ ಪ್ರಯತ್ನಕ್ಕಾಗಿ
ಅಭಿನಂದನ ಪ್ರದರ್ಶನ.

——:♦:——

ಬೆಂಗಳೂರ ಜಿಲ್ಲೆಯ ಹುಸ್ಕೂರ ಗ್ರಾಮದ ಶ್ರೀ ಸೋಮಶೇಖರಯ್ಯನವರು ತಮ್ಮ ೨೨ ನೆಯ ವರ್ಷದ ವಯಸ್ಸಿನಲ್ಲಿ ಕಾಶೀ ಹಿಂದೂ ವಿಶ್ವ ವಿದ್ಯಾಲಯದ ೧೯೩೬ ನೆಯ M. Sc. ಪರೀಕ್ಷೆಯಲ್ಲಿ ಗಣಿತ ಶಾಸ್ತ್ರವನ್ನು ತೆಗೆದುಕೊಂಡು ಮೊದಲನೆಯ ತರಗತಿಯಲ್ಲಿ ಮೊದಲನೆಯವರಾಗಿ ತೇರ್ಗಡೆ ಹೊಂದಿದ್ದಕ್ಕಾಗಿ ಕಾಶೀ ಶ್ರೀ ಜಗದ್ಗುರು ಜಯದೇವ ಫ್ರೀ ಬೋರ್ಡಿಂಗಿನ ಪಂಡಿತ ಸಮಿತಿಯವರು ತಾ. ೫-೫-೩೬ ನೆಯ ದಿವಸ ಬೋರ್ಡಿಂಗಿನಲ್ಲಿ ಶ್ರೀ ರಾಮಾವಧಿ ದ್ವಿವೇದಿ ವ್ಯಾಕರಣ ಆಚಾರ್ಯ ಇವರ ಅಧ್ಯಕ್ಷತೆಯ ಕೆಳಗೆ ಸಭೆಯನ್ನು ಏರ್ಪಡಿಸಿ ಶ್ರೀ ಸೋಮಶೇಖರಯ್ಯನವರ ಈ ಸ್ತುತ್ಯ ಪ್ರಯತ್ನ ದೆಶೆಯಿಂದ ತಮ್ಮ ಹಾರ್ದಿಕ ಅಭಿನಂದನಗಳನ್ನು ಪ್ರದರ್ಶಿಸಿದರು.

ಶ್ರೀ ಸೋಮಶೇಖರಯ್ಯನವರು ತಮ್ಮ ಅಧ್ಯಯನದ ಕಾಲದಲ್ಲೆಲ್ಲ ಅನುಭೋಗಿಸಿದ ಕಷ್ಟ ನಷ್ಟಗಳು ಮತ್ತು ಉಚ್ಚ ಶಿಕ್ಷಣಕ್ಕಾಗಿ ಪರದೇಶಕ್ಕೆ ಹೋಗಬೇಕೆಂಬ ಅವರ ಮಹತ್ವಾಕಾಂಕ್ಷೆಯು ಮೊದಲಾದ ಅವರ ಉಚ್ಚ ಆದರ್ಶ ಗುಣಗಳ ವಿಷಯದಲ್ಲಿ ಭಾಷಣಗಳಾದವು. ಈ ಭಾಷಣಗಳ ಸಾರಾಂಶವು ಮಹತ್ವದ್ದಾದುದರಿಂದ ಅದನ್ನು ಪ್ರತಿಯೊಬ್ಬ ವೀರಶೈವನು ತಿಳಿದುಕೊಳ್ಳುವುದು ಬಹಳೇ ಅಗತ್ಯದ್ದು. ಆದುದರಿಂದ ಆ ಸಾರಾಂಶವನ್ನೇ ಇಲ್ಲಿ ಈ ಕೆಳಗೆ ಕೊಟ್ಟಿದ್ದಾಗಿದೆ.

ಶ್ರೀ ಸೋಮಶೇಖರಯ್ಯನವರು ತಾಯಿ ತಂದೆಗಳ ಅಪ್ಪಣೆಯನ್ನು ಮೀರಿ ಕಾಶಿಗೆ ಸಂಸ್ಕೃತ ಅಭ್ಯಾಸಕ್ಕಾಗಿ ಬಂದರು. ಇವರ ಮನೆತನವು ತನ್ನಷ್ಟಕ್ಕೆ ತಾನು ಸ್ವಲ್ಪ ಅನುಕೂಲ ಸ್ಥಿತಿಯಲ್ಲಿದ್ದರೂ ಇವರಿಗೆ ಮಾತ್ರ ಮನೆಯಿಂದ ದುಡ್ಡಿನ ಸಹಾಯವು ದೊರೆಯಲೇ ಇಲ್ಲ. ಕೆಲವು ಹಿತಚಿಂತಕರ ಪ್ರೇರಣೆಯಿಂದ ಅರ್ಥಕಾರಿ ವಿದ್ಯೆಯನ್ನು ಕಲಿಯುವುದು ಯುಕ್ತವಾದುದೆಂದು ಸಂಸ್ಕೃತ ಓದುವುದನ್ನು ಬಿಟ್ಟು ಇಂಗ್ಲಿಷನ್ನೇ ಓದಲು ಪ್ರಾರಂಭಿಸಿದರು. ತಮ್ಮ ಈಶ್ವರದತ್ತವಾದ ಗಣಿತ ಜ್ಞಾನದ ಬಲದಿಂದಲೇ ಇವರ ಉಪಜೀವನದ ಬಹು ಭಾಗವು ನಡೆಯುತ್ತಿದ್ದಿತು. ಹೇಗೋ ಕಷ್ಟ ರೀತಿಯಲ್ಲಿ ಜಂಗಮವಾಡಿ ಮಠವಲ್ಲಿದ್ದುಕೊಂಡು ಪ್ರಾಯವ್ಹೇಟ ರೀತಿಯಲ್ಲಿ ಯಾರ ಸಹಾಯವಿಲ್ಲದಲೇ ತಮ್ಮ ಸ್ವಂತ ಬುದ್ಧಿಯ ಬಲದಿಂದ ೧೯೩೦ ನೆಯದರಲ್ಲಿ ಕಾಶೀ ಹಿಂದೂ ವಿಶ್ವ ವಿದ್ಯಾಲಯದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತು ತೇರ್ಗಡೆಯಾದರು. ಇವರು ಇಂಟರ ಮೀಜಿಯೇಟನ್ನು (೧೯ ನೇ ವರ್ಷ) ಓದುತ್ತಿರುವಾಗ ಇವರ ಈಶ್ವರದತ್ತ ಗಣಿತ ಜ್ಞಾನದ ದೇಣಿಗೆಯನ್ನು ನೋಡಿ ಪ್ರೊ|| ಮಂಗಳೂರ ಸ್ಮಬ್ರಹ್ಮಣ್ಯ ಶಾಸ್ತ್ರಿಗಳಿಗೆ ಬಹಳೇ ಮೆಚ್ಚಿಗೆಯಾಗಿ ತಮ್ಮ ಮನೆಯಲ್ಲಿಯೇ ವಾಸ ಮಾಡಲು ಹೇಳಿ ಉಚಿತವಾಗಿ ಸಾಕಷ್ಟು ಅನುಕೂಲತೆಗಳನ್ನು M. Sc. ಆಗುವ ವರೆಗೂ ಒದಗಿಸಿ ಕೊಟ್ಟರು. ಇಂಟರ ಮೀಜಿಯೇಟನಲ್ಲಿ (Final) ಗಣಿತ ವಿಷಯದಲ್ಲಿ ವೈಶಿಷ್ಟ್ಯ (Distinction) ವನ್ನು ಪಡೆದು ತೇರ್ಗಡೆಯಾದರು.

B. A. B. Sc. ಯಲ್ಲಿ ಗಣಿತ ವಿಷಯದಲ್ಲಿ ಮೊದಲನೆಯ ತರಗತಿಯಲ್ಲಿ ಮೊದಲನೆಯವರಾಗಿ ತೇರ್ಗಡೆಯಾದದ್ದರಿಂದ ಇಟ್ಟ ಶ್ರೀ ಶಿವಪ್ರಸಾದರ Gold medal ನ್ನು ಬಹುಮಾನ ಹೊಂದಿದರು. B. Sc. ಯಲ್ಲಿ Physics (ಪದಾರ್ಥ ವಿಜ್ಞಾನ ಶಾಸ್ತ್ರ) ವಿಷಯವನ್ನು ತೆಗೆದುಕೊಂಡು ಇಟ್ಟ ಕೇ. ಪಿ. ದೇವಸ್ಥಾನ ಇವರ Gold medal ನ್ನೂ ಬಹುಮಾನವಾಗಿ ಹೊಂದಿದರು. ಈ ರೀತಿಯಾಗಿ B. A. B. Sc. ಯಲ್ಲಿ ತೇರ್ಗಡೆಯಾದದ್ದರಿಂದ ತಿಂಗಳಿಗೆ ೨೦ ರೂ. ಯಂತೆ Merits Scholarship ದೊರೆಯಹತ್ತಿತು. ಮುಂದೆ M. A. M. Sc. ಯಲ್ಲಿಯ ಗಣಿತ ಶಾಸ್ತ್ರವನ್ನು ತೆಗೆದುಕೊಂಡು ಮೊದಲನೆಯ ತರಗತಿಯಲ್ಲಿ ಮೊದಲನೆಯವರಾಗಿಯೇ ತೇರ್ಗಡೆಯಾದರು.

ಈ ವಿಧವಾಗಿ ಆರ್ಥಿಕ ಶಾರೀರಕ ಶ್ರಮಗಳನ್ನು ಅನುಭೋಗಿಸುತ್ತಾ ಇಂಗ್ಲೀಷ ವಿದ್ಯೆಯಲ್ಲಿ ಉಚ್ಚ ಸ್ಥಿತಿಯನ್ನು ಹೊಂದಿದಂತೆ ಸ್ವಭಾವ ವೇಷ ಭೂಷ ನಡೆ ನುಡಿಗಳಲ್ಲಿಯೂ ಇವರು ಉಚ್ಚ ಸ್ಥಿತಿಯನ್ನು ಹೊಂದಿದವರಾಗಿರುತ್ತಾರೆ. ಇವರು ಸ್ವಭಾವದಿಂದ ಎಷ್ಟು ಸರಳ, ಮತ್ತು ಸಾದಾ ಎಂಬುದು ಇವರನ್ನು ಕಂಡ ಮಾತ್ರದಿಂದ ತಿಳಿದು ಬರುವದಾಗಿದೆ. ಇವರಿಗೆ ಉಚ್ಚ ಶಿಕ್ಷಣಕ್ಕಾಗಿ ಪರದೇಶಕ್ಕೆ ಹೋಗಬೇಕೆಂಬ ಕುತೂಹಲವು ಬಹಳೇ ಉಂಟು. ಹಲ್ಲಿದ್ದವರಿಗೆ ಕಡಲಿ ಇಲ್ಲದಂತೆ ಉಚ್ಚ ಶಿಕ್ಷಣ ಹೊಂದುವ ಕುತೂಹಲವಿದ್ದರೂ ಅದನ್ನು ನೆರವೇರಿಸಲು ಇವರಲ್ಲಿ ದುಡ್ಡು ಇಲ್ಲದಂತಾಗಿದೆ. ಸಮಾಜದವರು ಅಭಿಮಾನದಿಂದ ಈ ವ್ಯಕ್ತಿಯ ಉತ್ಸಾಹ ಸಾಹಸಗಳು ಭಂಗವಾಗದಂತೆ ಮಾಡುವುದರಲ್ಲಿ ಸಾಕಷ್ಟು ಸಮರ್ಥರಾಗಿದ್ದಾರೆ. ಈ ರೀತಿಯಾದ ಬಹುಮಾನಗಳೊಡನೆ ಯೋಗ್ಯ ರೀತಿಯಲ್ಲಿ M. Sc. ಯ ವರೆಗೂ ತೇರ್ಗಡೆಯನ್ನು ಹೊಂದಿದವರು ನಮ್ಮ ಸಮಾಜದಲ್ಲಿ ಬಹು ಅಪರೂಪ. ಸಮಾಜಾಭಿಮಾನಿಗಳು ಉದಾರ ಹೃದಯರು ಹಾಗೂ ವಿದ್ಯಾಭಿಮಾನಿಗಳಾದ ನಮ್ಮ ವೀರಶೈವರಿಲ್ಲರು ತನು ಮನ ಧನಗಳಿಂದ ಸಹಾಯ ಮಾಡಿದ್ದಲ್ಲಿ ನಮ್ಮ ಸಮಾಜದಲ್ಲಿ ಇದೊಂದು ಬಹು ಅಭಿಮಾನ ಪಡತಕ್ಕ ಆದರ್ಶ ವ್ಯಕ್ತಿಯಾಗುವುದರಲ್ಲಿ ಸಂದೇಹವೇ ಇಲ್ಲ.

ಧಾರವಾಡ ಘಂಡಿನವರೂ, ಶಿರಸಂಗಿ ಘಂಡಿನವರೂ, ಮಹಾ ಮಹಾ ಧನಿಕರೂ ಮಹಾ ಮಹಾ ಸ್ವಾಮಿಗಳೂ ಈ ವಿಷಯದಲ್ಲಿ ಉದಾರಾಶ್ರಯವನ್ನು ತೋರಿಸಿದರೆ ಬಹಳೇ ಒಳ್ಳೇದಾಗುವದು. ಈ ಕಾರ್ಯಕ್ಕೆ ಸಹಾಯ ಮಾಡಬೇಕೆಂಬ ಇಚ್ಛೆಯುಳ್ಳ ಪುಣ್ಯಾತ್ಮರು "ಸುದರ್ಶನ" ಕಾರ್ಯಾಲಯ ಸೋಲಾಪೂರ, ಹಾಗೂ "ಶರಣ ಸಂದೇಶ" ಕಾರ್ಯಾಲಯ ಅಲಮಟ್ಟಿ ಈ ಪತ್ತೆಗಳಿಗೆ ತಿಳಿಸುವ ಕೃಪೆಯಾಗಬೇಕು. ಶ್ರೀ. ಸೋಮಶೇಖರಯ್ಯನವರಿಗೆ ಹಾರ ತುರಾಯಿಗಳನ್ನು ಅರ್ಪಿಸಿದ ಮೇಲೆ ಶ್ರೀ ಭಗವಾನ್ ಬಸವೇಶ್ವರರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪಂಡಿತ ಸಮಿತಿ.

[ಶ್ರೀ ಸೋಮಶೇಖರಯ್ಯನವರನ್ನು ವಿದ್ಯಾಭಿಮಾನಿಗಳಾದ ಸಕಲರೂ ಹೃದಯಪೂರ್ವಕ ಅಭಿನಂದಿಸಿದರಲಾರರು. ಇವರ ಮುಂದಣ ವಿದ್ಯಾಭ್ಯಾಸಕ್ಕೆ ಉದಾರಿಗಳಾದ ಧನಿಕರು ತುಂಬಾ ಸಹಾಯ ಮಾಡುವರೆಂದೇ ನಂಬಿದ್ದೇವೆ. ಇವರು ಕರ್ನಾಟಕಕ್ಕೆ ಬಂದು ಇಲ್ಲಿಯ ಪ್ರಮುಖರ ಮೂಲಕ ಪ್ರಯತ್ನಿಸುವುದು ವಿಹಿತವು. ಸಂಪಾದಕ.]

—ವೆಂಗುರ್ಲೆಯಲ್ಲಿ ಬ್ಯಾ. ತಾತ್ಯಾಸಾಹೇಬ ಸಾವರಕರ್ ಮೊದಲಾದ ೧೭೫ ಪ್ರಮುಖರು ಅದಿಜನರ ಕೇರಿಯಲ್ಲಿ ಅದಿಜನರೊಂದಿಗೆ ಸಹಭೋಜನ ಸಮಾರಂಭವನ್ನು ಜರುಗಿಸಿದರು. ಇವರಲ್ಲಿ ೨೫ ಸವರ್ಣೀಯ ಸ್ತ್ರೀಯರೂ ಇದ್ದರು.

—ವಿಜಾಪುರಕ್ಕೆ ಶ್ರೀ. ಡಿ. ಎಸ್. ಮೋಡಕ ಇವರನ್ನು ಕಲೆಕ್ಟರರನ್ನಾಗಿ ನಿಯಮಿಸಿದ್ದಾರೆ. ಜೂನ್ ೧ ನೆಯ ತಾರೀಖಿನ ದಿವಸ ಇವರು ತಮ್ಮ ಕಾರ್ಯ ಸೂತ್ರವನ್ನು ಹಿಡಿಯಬಹುದು.

ವಿವಿಧ ವರ್ತಮಾನ.

ಭೂಗರ್ಭ ಶೋಧಕ ಯಂತ್ರ.

ಇಟಲಿಯ ಸ್ಟಿಯಾಟಸಿ ಎಂಬ ಪ್ರೊಫೆಸರರು ಒಂದು ಯಂತ್ರವನ್ನು ಶೋಧಿಸಿದ್ದಾರೆ. ಅದು ಭೂಗರ್ಭದೊಳಗಿನ ಯಾವ ಪದಾರ್ಥವನ್ನಾದರೂ ಕಂಡು ಹಿಡಿಯಬಲ್ಲದು. ಇಟಲಿ ಸರಕಾರದವರು ಅದನ್ನು ಸಂಪೂರ್ಣವಾಗಿ ಪರೀಕ್ಷಿಸಿ ಅದು ತೃಪ್ತಿಕರವಿರುವದೆಂದು ಹೇಳುತ್ತಿದ್ದಾರೆ. ಆ ಯಂತ್ರದ ಸಹಾಯದಿಂದ ಟಸ್ಕನಿ ಪ್ರಾಂತದಲ್ಲಿ ಕಲ್ಲಿದ್ದಲಿಯ ಒಂದು ವಿಸ್ತೀರ್ಣ ಕ್ಷೇತ್ರವು ಇಟಲಿಗೆ ಕಂಡು ಬಂದಿದೆ. ಮತ್ತು ಸಿಸಿಲಿ, ಸಾರ್ಡಿನ್ ದ್ವೀಪಗಳಲ್ಲಿ ೯ ಎಣ್ಣೆಯ ಭಾವಿಗಳೂ, ಕಬ್ಬಿಣ, ಕಲ್ಲಿದ್ದಲಿಗಳ ಖಣಿಗಳೂ ದೊರೆತಿವೆ.

ಈ ಯಂತ್ರದ ಒಂದು ವಿಶೇಷತೆಯೆಂದರೆ ಭೂಗರ್ಭದೊಳಗಿನ ವಸ್ತುಗಳೆಲ್ಲ ಒಂದೊಂದು ವಿಧದ ತರಂಗಗಳನ್ನು ಬೀರುವದನ್ನು ಕಂಡುಹಿಡಿಯುತ್ತದೆ. ಇಷ್ಟು ತರಂಗ (ತೆರೆ) ಗಳಿರುವುದರಿಂದ ಅದು ಇಂಥ ವಸ್ತುವೆಂದು ಅರಿತರೆ ತೀರಿತು.

ಕ್ಷೌರದ ಬಂಟತನ.

ಅತಿ ತೀವ್ರ ಕ್ಷೌರ ಮಾಡುವದರಲ್ಲಿ ಬೂಡಾಪೆಸ್ಟ (ಹಂಗರಿ) ಪಟ್ಟಣದ ಕ್ಷೌರಿಕನೊಬ್ಬನು ಜಗತ್ತಿನಲ್ಲೆಲ್ಲ ಬಂಟನಾಗಿದ್ದಾನೆ. ಅವನು ಕೇವಲ ೨೮ ಸೇಕಂದುಗಳಲ್ಲಿ ಸ್ವಚ್ಛವಾಗಿ ತಲೆ ಬೋಳಿಸಬಲ್ಲನು.

ತತ್ತಿಗಳನ್ನು ತಿನ್ನದವರಿಗೆ.

ಕೋಳೀ ತತ್ತಿಗಳನ್ನು ತಿನ್ನಬೇಕೆಂದು ಕೆಲವೊಂದು ವ್ಯಾಧಿಯ ಅವಧಿಯಲ್ಲಿ ವೈದ್ಯರು ಹೇಳುವದುಂಟು. ಕೆಲವರಿಗೆ ತತ್ತಿಗಳನ್ನು ತಿನ್ನುವದು ಶಕ್ಯವೇ ಇರುವದಿಲ್ಲ. ಅಂಥವರು ಬೆಣ್ಣೆ, ಜೇನುತುಪ್ಪ ಮತ್ತು ಬೆಲ್ಲವನ್ನು ಸಮನಾಗಿ ಕೂಡಿಸಿ ಮುಂಜಾವಿನಲ್ಲಿ ತೆಗೆದುಕೊಳ್ಳಬೇಕು. ತತ್ತಿಯ ಗುಣಗಳು ಈ ಮಿಶ್ರಣದಲ್ಲಿರುವವಂತೆ.

ಕಾಮವಿಕಾರದ ವಿವೇಚನ

ಹಿಂದುಸ್ಥಾನದಲ್ಲಿಯ ಬಾಲಬಾಲಿಕೆಯರ ಕಾಮವಿಕಾರವು ಚಿಕ್ಕವಯಸ್ಸಿನಲ್ಲಿಯೇ ಏಕೆ ಉತ್ಪನ್ನವಾಗುತ್ತದೆ? ಶೀತಪ್ರದೇಶದ ಬಾಲಬಾಲಿಕೆಯರಿಗೆ ಅಷ್ಟು ತೀವ್ರ ಏಕೆ ಉಂಟಾಗುವದಿಲ್ಲ? ಈ ಪ್ರಶ್ನೆಗಳಿಗೆ ಹಿಂದುಸ್ಥಾನದ ಉಷ್ಣ ಸೂರ್ಯಪ್ರಕಾಶವೇ ಕಾರಣವೆಂದು ಹೇಳುತ್ತಾರೆ. ಏಕಂದರೆ ಸೂರ್ಯಪ್ರಕಾಶವು ದೇಹಕ್ಕೆ ವ್ಹಿಟಾಮಿನ್ ಡಿ (Vitamin D) ಎಂಬ ಆಹಾರ ದ್ರವ್ಯವನ್ನು ಒದಗಿಸಿಕೊಡುತ್ತದೆ.

ಈ ಬಗ್ಗೆ ಲೀಪಝಿಗ್ ಜರ್ಮನಿ ಪ್ರೊ. ಡಾ. ಎಫ್. ಡಬ್ಲ್ಯು ಕೋಚ ಎಂಬುವವರು ಈ ಪ್ರಕಾರ ಹೇಳಿರುತ್ತಾರೆ— ಯುರೋಪಖಂಡದ ಬಾಲಿಕೆಯರು ೧೭ ವರ್ಷಕ್ಕೂ ಬಾಲಕರು ೨೦ ವರ್ಷಕ್ಕೂ ಪ್ರಾಯಕ್ಕೆ ಬರುತ್ತಾರೆ. ಅವರ ಈ ಪ್ರಾಯದ ವಯಸ್ಸು ಅವರ ತಂದೆ ತಾಯಿಗಳಿಗಿಂತ ತೀವ್ರವೇ ಎನ್ನಬಹುದು. ಏಕಂದರೆ ಮಹಾಯುದ್ಧದ ಪೂರ್ವದಲ್ಲಿ ಬಾಲಿಕೆಯರು ೨೩ ವರ್ಷಕ್ಕೆ ಬಾಲಕರು ೨೫ ವರ್ಷಕ್ಕೆ ಪ್ರಾಯಕ್ಕೆ ಬರುತ್ತಿದ್ದರು. ಇದಕ್ಕೆ ಮುಖ್ಯ ಕಾರಣವೇನಂದರೆ ಈಗಿನ ಆಹಾರದಲ್ಲಿ ವ್ಹಿಟಾಮಿನ್ ಡಿ. ದ್ರವ್ಯವು ವಿಶೇಷವಾಗಿರುತ್ತದೆ.

ಆಲ್ಪ್ಸ ಪರ್ವತದಲ್ಲಿ ಸುರಂಗಮಾರ್ಗ.

ಫ್ರಾನ್ಸದ ರಾಜಧಾನಿಯಾದ ಪ್ಯಾರಿಸಿನಿಂದ ಇಟಲಿಯ ರಾಜಧಾನಿ ರೋಮಪಟ್ಟಣದ ವರೆಗೆ ಸುರಂಗಮಾರ್ಗವನ್ನು ಮಾಡಬೇಕೆಂದು ಫ್ರಾನ್ಸ ಮತ್ತು ಇಟಲಿ ಈ ಎರಡೂ ದೇಶಗಳು ನಿಶ್ಚಯ ಮಾಡಿವೆ. ಈ ಸುರಂಗಮಾರ್ಗದ ಮಧ್ಯದಲ್ಲಿ ಆಲ್ಪ್ಸ ಪರ್ವತವು ಇರುವುದರಿಂದ ಅದರ ಅತ್ಯುನ್ನತ ಶಿಖರವಾದ ಮಾವುಂಟ ಬ್ಲ್ಯಾಂಕ ಎಂಬುದರ ಮಧ್ಯದಲ್ಲಿ ಸುರಂಗವನ್ನು ತೋಡಲಾಗುವದು. ಈ ಮಾರ್ಗದಿಂದ ೩೧೦ ಮೈಲುಗಳ ಅಂತರವು ಕಡಿಮೆಯಾಗುವದಂತೆ.

ವಿಮಾನಗಳಿಂದ ಅವತರಿಸುವದು.

ಯುದ್ಧಕ್ಕೆ ಬೇಕಾಗುವ ಸನ್ನಾಹಗಳನ್ನು ಯುರೋಪಖಂಡದಲ್ಲಿಯ ರಾಷ್ಟ್ರಗಳು ಒಂದಕ್ಕಿಂತಲೂ ಮತ್ತೊಂದು ಮಿಗಿಲಾಗಿ ಸಿದ್ಧಪಡಿಸುತ್ತಲಿವೆಯಷ್ಟೇ. ಇವುಗಳಲ್ಲಿ ರಶಿಯಾ ದೇಶವು ಅಗ್ರೇಸರವಾಗಿದೆಯೆನ್ನಬಹುದು. ಈಗ ಹಾಲನ್ನು ಘನಪದಾರ್ಥವನ್ನಾಗಿ ಮಾಡಿರುವಂತೆ ರಶಿಯಾದೇಶವು ರಕ್ತವನ್ನೂ ಗಟ್ಟಿಗೊಳಿಸಿ ಘನಪದಾರ್ಥವನ್ನಾಗಿ ಮಾಡಿ ಸಂಗ್ರಹಿಸುತ್ತಲಿದೆ. ಯುದ್ಧದಲ್ಲಿ ರಕ್ತ ಸೋರಿ ಅನೇಕ ದಂಡಾಳುಗಳು ಮರಣ ಹೊಂದುವರಷ್ಟೆ. ಅವರಿಗೆ ಕೂಡಲೇ ರಕ್ತದ ಪೂರೈಕೆಮಾಡಿದರೆ ಮರಣಗಂಡಾಂತರವು ತಪ್ಪುವದು. ಇದಕ್ಕಾಗಿ ಯುದ್ಧದ ಕ್ಯಾಂಪಿನಲ್ಲಿಯ ಆಸ್ಪತ್ರಿಗಳಿಗೆ ಈ ಘನೀಭೂತರಕ್ತವನ್ನು ವಿಮಾನಿನಿಂದ ತೂರುವರು. ಆವುಗಳಿಗೊಂದೊಂದು ವಾಯು ಗೋಲಗಳನ್ನು ಕಟ್ಟಿರುವುದರಿಂದ ಅವು ಏನೂ ಅಪಾಯವಾಗದೆ ಆಸ್ಪತ್ರಿಗಳ ಮೇಲೆ ಇಳಿಯುವವು. ಮತ್ತು ರಣರಂಗಧಲ್ಲಿ ಅಲ್ಲಿಂದಲ್ಲಿ ವೈದ್ಯರನ್ನು ಒದಗಿಸಲಿಕ್ಕೂ ಈ ವಾಯುಗೋಲಗಳ ಉಪಯೋಗವಾಗುವದು. ಎಲ್ಲಿಯಾದರೂ ದಂಡಾಳುಗಳು ಕಡತ ಹತ್ತಿ ರಕ್ತಸ್ರಾವವಾಗಿ ಬಿದ್ದಿರುವುದನ್ನು ಕಂಡಕೂಡಲೇ ವಾಯುಗೋಲಿನಿಂದ ಡಾಕ್ಟರನು ಸರ್ರನೇ ಇಳಿದು ಅವರಿಗೆ ರಕ್ತದ ಪೂರೈಕೆಮಾಡಿ ಚೇತರಿಸುವನು. ಇದಕ್ಕೇ ಅವತಾರ (ಇಳಿಯೋಣ) ವೆನ್ನಬೇಕಲ್ಲವೇ?

ಶೋಕ ಸಭೆ.

ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಪರಮ ಪೂಜ್ಯರಾದ ಶ್ರೀ ಮಹಾಸ್ವಾಮಿಗಳು ಬೀಳೂರು ಇವರು ಲಿಂಗೈಕ್ಯರಾದ ಬಗ್ಗೆ ವೀರಶೈವ ಸಮಾಜಕ್ಕಾದ ದುಃಖ ಪ್ರದರ್ಶನಕ್ಕಾಗಿ ಕಾಶಿಯಲ್ಲಿ ಶ್ರೀ ಮೃತ್ಯುಂಜಯ ದೇವರು ಮುಧೋಳ ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರುಗಿತು.

ಹೊಸದು! ತೀರ ಹೊಸದು!!

ಅರವಿಂದ ಗ್ರಂಥಮಾಲೆ.

ಸಂಪಾದಕರು:— ಮುಧುರಚೆನ್ನರು.

ವಿಚಾರ ಪ್ರಚುರ ವಾಙ್ಮಯವನ್ನು ಒದಗಿಸುವ, ಸುರಸ ಸಾಹಿತ್ಯವನ್ನು ಸೂರೆಗೊಳಿಸುವ ಒಂದೇ ಒಂದು ಗ್ರಂಥಮಾಲೆಯೆಂದರೆ ಇದೇ. ೧೦೦ ರಿಂದ ೧೫೫ ಪುಟಗಳ ಅರು ಪುಸ್ತಕಗಳು. ಅಲ್ಲದೆ ಕಾಣಿಕೆಯ ಪುಸ್ತಕವೊಂದು ಕೊಡಲ್ಪಡುವದು. ಮೊದಲನೆಯ ಪುಷ್ಪವಾದ 'ನಂದನವನ' ವು ಈಗಾಗಲೇ ಅರಳಿದೆ. ಬೆಲೆ ರೂ ೩-೮-೦,

ವಿಳಾಸ:—

'ಅರವಿಂದ ಗ್ರಂಥಮಾಲಾ' ಕಾರ್ಯಾಲಯ

ಪೋ. ಹಲಸಂಗಿ ಜಿ. ವಿಜಾಪುರ.

ಅಪೂರ್ವ ಶೋಧ! ಅಪೂರ್ವ ಶೋಧ!!

ಜರ್ಮನಿಯವರು ತಯಾರಿಸಿದ ವಿಷದ ಲಾಯಿಟು ಈಗ
ಹಿಂದುಸ್ಥಾನದಲ್ಲಿಯೇ ಸಿದ್ಧವಾಗುವಂತಾಗಿದೆ.

ಕೃಮಿನಾಶಕ ಲಾಯಿಟ.

ಸುಖವಾದ ನಿದ್ರೆಯೂ ಆರೋಗ್ಯವೂ ಬೇಕಾಗಿದ್ದರೆ ಇದನ್ನುಪಯೋಗಿಸಿರಿ. ಬರೇ ಪ್ರಕಾಶದಿಂದಲೇ ಸಾಂಕ್ರಾಮಿಕ ರೋಗಗಳನ್ನು ಹೆಚ್ಚಿಸುವ ಮತ್ತು ಭಯಂಕರ ತ್ರಾಸಕೊಡುವ ತಗಣಿ, ದೋಮಿ, (ಗುಂಗಾಡಿ) ಚಿಕ್ಕಾಡ, ಪ್ಲೇಗಕೃಮಿ, ಇಲಿ, ವಗೈರೆ ಪ್ರಾಣಿಗಳು ಮಾಯವಾಗುವವು. ಬಡಬಗ್ಗರಿಗೂ ಕೂಡ ಸುಲಭವಾಗಿ ದೊರೆಯಬೇಕೆಂದು ಕಿಮ್ಮತ್ತನ್ನು ಕಡಿಮೆ ಮಾಡಲಾಗಿದೆ. ಇದರ ಉಪಯೋಗದಿಂದ ಮನುಷ್ಯನಿಗೆ ಯಾವ ತರದ ಅಪಾಯವೂ ಇಲ್ಲ. ಉಪಯೋಗಿಸುವ ವಿಧಾನವು ಬಾಟ್ಲಿಯ ಸಂಗಡಲೇ ಇರುವದು. ೯ ದಿವಸಕ್ಕೆ ಸಾಲುವಷ್ಟು ೧ ಬಾಟ್ಲಿಗೆ ೦-೪-೦ ೧ ಡಜನ್ನಿಗೆ ೩-೧೨-೦. ವ್ಹಿ. ಪಿ. ಚಾರ್ಜ ಬೇರೆ.

ಕೆಳಗಿನ ಪ್ಲೇಗ ಸಂಜೀವಿನಿ ಆಫೀಸುಗಳಲ್ಲಿಯೂ ಏಜೆಂಟ್‌ರಲ್ಲಿಯೂ ದೊರೆಯುವದು.

ಪ್ಲೇಗ ಸಂಜೀವಿನಿ ಆಫೀಸ. ಸೋಲಾಪುರ.
" " ಹುಬ್ಬಳ್ಳಿ.
" ಬೆಳಗಾಂವ.

ಏಜೆಂಟರು.
ಬಸೆಟ್ಟಪ್ಪ ಹಲಕುರ್ಕಿ ಬಾಗಲಕೋಟೆ.
ಎಸ್. ಚಂದ್ರಪ್ಪ ತಾಂಡೂರ.
ಪ್ಲೇಗ ಸಂಜೀವಿನಿ ಆಫೀಸ ಗುಲಬರ್ಗಾ.

ಕಾಲರಾ ಸಂಜೀವಿನಿ.

ಕಾಲರಾ—

ಇದು ಮಾನವ ಚಿಕಿತ್ಸೆಗೆ ಮಿರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇ ಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿನುಗೆ ಖಂಡಿತವಾಗಿಯೂ ಆತ್ಯಾಶ್ಚರ್ಯವೂ ಆನಂದವೂ ಉಂಟಾಗುವವು.

—ಸಂಜೀವಿನಿ.

ಬೆಲೆ—
೧ ರೂ. ೫ ಆ.

ವಿಳಾಸ— ಪ್ಲೇಗ ಸಂಜೀವಿನಿ ಆಫೀಸ್, ಗುಲಬರ್ಗಾ.